ಉಪನ್ಯಾಸ ಗ್ರಂಥಮಾಲೆ
೭೯

ಹೊಟ್ಟೆಯ ಹುಣ್ಣು

ಡಾ॥ ಪಿ. ಎಸ್. ಶಂಕರ್
ಎಂ. ಡಿ., ಎಫ್. ಸಿ. ಸಿ. ಪಿ. (ಯು. ಎಸ್. ಎ.)

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೬೮

ಉಪನ್ಯಾಸ ಗ್ರಂಥಮಾಲೆ

೧. ಭವಭೂತಿ (ದ್ವಿತೀಯ ಆವೃತ್ತಿ) –ಕೆ. ಕೃಷ್ಣಮೂರ್ತಿ
೨. ಮನೋರೋಗಗಳು (ತೃ.ಆ.) –ಎನ್. ಆರ್. ಕುಲಕರ್ಣಿ
೩. ಪ್ರಥಮ ಪಂಚವಾರ್ಷಿಕ ಯೋಜನೆ
ಹಾಗೂ ಒಕ್ಕಲುತನ –ಎನ್. ಪಿ. ಪಾಟೀಲ
೪. ಗಾದೆಗಳು (ತೃತೀಯ ಆವೃತ್ತಿ) –ಎ. ಕೆ. ರಾಮಾನುಜನ್
೫. ಭಾರತದಲ್ಲಿ ಜಾತಿ ಪದ್ಧತಿ (ದ್ವಿ.ಆ.)–ವ್ಹಿ. ಎಸ್. ಡಿ'ಸೋಜಾ
೬. ಕೀಟಕ ಪಿಡುಗುಗಳ ಸಮೀಕ್ಷಣೆ (ದ್ವಿ.ಆ.)
–ಎಸ್. ಎಸ್. ಕಟಗಿಹಳ್ಳಿಮಠ
೭. ರಾಜಕೀಯ ಪಕ್ಷಗಳು(ದ್ವಿ.ಆ.)-ಎನ್.ರಾಜಗೋಪಾಲರಾವ್
೮. ಸ್ವಾದಿ ಅರಸುಮನೆತನ (,,)–ಎಸ್. ಎಸ್. ಮಾಳವಾಡ
೯. ಮಕ್ಕಳ ಶಿಕ್ಷಣ (ತೃ.ಆ.) –ಡಿ. ಎಸ್. ಕರ್ಕಿ
೧೦. ಮೂಢ ನಂಬಿಕೆಗಳು (,,) –ಎಲ್. ಆರ್. ಹೆಗಡೆ
೧೧. ಸಂಸ್ಕೃತ ಕವಯಿತ್ರಿಯರು (ದ್ವಿ. ಆ.)–ಕೆ. ಟಿ. ಪಾಂಡುರಂಗಿ
೧೨. ನಿತ್ಯಜೀವನದಲ್ಲಿ ರಸಾಯನಶಾಸ್ತ್ರ (,,) –ಬಿ. ವಿರೂಪಾಕ್ಷಪ್ಪ
೧೩. ಸಾರ್ವಜನಿಕ ಆಡಳಿತ (ದ್ವಿ. ಆ.) –ಜಿ. ಎಸ್. ಹಾಲಪ್ಪ
೧೪. ವಿಚಾರವಾದ (,,) –ಗೌರೀಶ ಕೈಕಿಣಿ
೧೫. ಮಹಾಕವಿ ಮಿಲ್ಟನ್ (,,) –ಜಿ. ಎಸ್.ಆಮೂರ
೧೬. ಭಾರತದಲ್ಲಿ ಗ್ರಂಥಾಲಯ ಪ್ರಸಾರ(,,)–ಕೆ. ಎಸ್. ದೇಶಪಾಂಡೆ
೧೭. ಭಾರತೀಯ ನಾಗರಿಕತೆಗೆ ಮನುವಿನ
ಕೊಡುಗೆ (ದ್ವಿ. ಆ.) –ಬಿ. ಎಚ್. ಶ್ರೀಧರ
೧೮. ಜನಸಂಖ್ಯೆ ಹಾಗು ಆಹಾರ ಸಮಸ್ಯೆ
–ಪಿ. ಎಂ. ಉಮಾಕಾಂತಶಾಸ್ತ್ರಿ
೧೯. ಸೌರವ್ಯೂಹ (ದ್ವಿ.ಆ.) –ಸಿ. ಎನ್. ಶ್ರೀನಿವಾಸ ಅಯ್ಯಂಗಾರ
೨೦. ಪ್ರಾಚೀನ ಭಾರತದಲ್ಲಿ ಸಾಮಾಜಿಕ ಜನಜೀವನ (ದ್ವಿ. ಆ.)
–ಸಿ. ವ್ಹಿ. ರಂಗಸ್ವಾಮಿ
೨೧. ಸಮಾಜ ಕಾರ್ಯ(ದ್ವಿ.ಆ.)–ಎಚ್. ಎಂ. ಮರುಳಸಿದ್ಧಯ್ಯ
೨೨. ಸಂಸತ್ತಿನ ಕಾರ್ಯಪದ್ಧತಿ (,,)–ಎ. ಎಂ. ರಾಜಶೇಖರಯ್ಯ
೨೩. ಕನ್ನಡನಾಡಿನ ಶಾಸನಗಳು (ದ್ವಿ. ಆ.) –ಪಿ. ಬಿ. ದೇಸಾಯಿ
೨೪. ಕವೀಂದ್ರ ರವೀಂದ್ರರು (,,) –ಎಸ್. ಎಸ್. ಮಾಳವಾಡ
೨೫. ನಾಗಾನಂದ (,,) –ಎಚ್.ಪಿ. ಮಲ್ಲೇದೇವರು
೨೬. ಜೀವನದಲ್ಲಿ ನಗೆ (,,) –ಎಂ. ಎಸ್. ಸುಂಕಾಪುರ
೨೭. ಬಸವಣ್ಣನವರ ಯೋಜನೆಗಳು (,,) –ಬಿ. ಸಿ. ಜವಳಿ

ಉಪನ್ಯಾಸ ಗ್ರಂಥಮಾಲೆ

೨೯

ಹೊಟ್ಟೆಯ ಹುಣ್ಣು

ಡಾ॥ ಪಿ. ಎಸ್. ಶಂಕರ್

ಎಂ.ಡಿ., ಎಫ್.ಸಿ.ಸಿ.ಪಿ. (ಯು.ಎಸ್.ಎ.)

ಭಾರತ ಸ್ವಾತಂತ್ರ್ಯದ ಬೆಳ್ಳಿಹಬ್ಬ

ಸಾಹಿತ್ಯ ಪ್ರಸಾರ ಯೋಜನೆ

ಪರಿಷತ್ತು - ಬೆಂಗಳೂರು.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೯೭೮

ಪ್ರಕಾಶಕರು :

ಎಸ್. ಎಸ್. ಒಡೆಯರ, ಎಂ.ಎ., ಎಲ್ ಎಲ್. ಬಿ.

ರಜಿಸ್ಟ್ರಾರ್,

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪ್ರಥಮ ಮುದ್ರಣ : ೩,೦೦೦ ಪ್ರತಿಗಳು (೧೯೬೮)

© ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಬೆಲೆ : ೭೫ ಪೈಸೆ

ಮುದ್ರಕರು :

ಜಯಪ್ರಕಾಶ ಕಟ್ಟೀಮನಿ

ಸಂಗಮ ಮುದ್ರಣಾಲಯ

ಸಾಧನಕೇರಿ, ಧಾರವಾಡ-೧

ಮುನ್ನುಡಿ

ನಮ್ಮ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗವು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ತಿಂಗಳು ಏರ್ಪಡಿಸುತ್ತಿರುವ ಉಪನ್ಯಾಸ ಶಿಬಿರಗಳು ದಿನೇ ದಿನೇ ಜನಪ್ರಿಯವಾಗುತ್ತ ಸಾಗಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕವೊದಗುವುದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭವಾದ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೆ ಎಪ್ಪತ್ತೆಂಟು ಪುಸ್ತಕಗಳು ಪ್ರಕಟವಾಗಿವೆ. ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ಎರಡು-ಮೂರು ಮುದ್ರಣಗಳನ್ನೂ ಕಂಡಿ

ರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಧನಸಹಾಯ ಆಯೋಗದವರು ಉಪನ್ಯಾಸ ಶಿಬಿರಗಳಿಗೂ, ಈ ಪುಸ್ತಿಕೆಗಳ ಪ್ರಕಟನೆಗೂ ನೆರವು ನೀಡುತ್ತಿದ್ದು ಅವರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆಗಳನ್ನು ಸೂಚಿಸುತ್ತದೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖವಾದ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಎ. ಎಸ್. ಅಡಕೆ
ಉಪಕುಲಪತಿ
ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ–೩
೨೫–೯–೧೯೬೮

ಅರಿಕೆ

ಕಳೆದ ಶತಮಾನಕ್ಕಿಂತಲೂ ಈ ಶತಮಾನದಲ್ಲಿ ನಾಗರಿಕತೆಯ ಫಲವೇನೋ ಎಂಬಂತೆ ಕರುಳಿನಲ್ಲಿ ಉದ್ಭವವಾಗುವ ಹುಣ್ಣುಗಳ ಸಂಖ್ಯೆ ಹೆಚ್ಚಾಗಿ ತೋರಿಬರುತ್ತಿದೆ. ಮಧ್ಯ ವಯಸ್ಸನ್ನು ಮುಟ್ಟುತ್ತಿರುವ ಹಾಗೂ ಮಹತ್ವಾಕಾಂಕ್ಷೆಯುಳ್ಳ, ಜವಾಬ್ದಾರಿಯುತ ಕಾರ್ಯನಿರ್ವಹಿಸುತ್ತಿರುವ ಅನೇಕರು ಹೊಟ್ಟೆಯ ತೊಂದರೆಯನ್ನು ಪ್ರಕಟಪಡಿಸುತ್ತಾರೆ.

ಜಠರರಸದಲ್ಲಿ ಆಮ್ಲ ಮತ್ತು ಜೀರ್ಣಕದ ಪ್ರಬಲ ಅಂಶಗಳಿದ್ದು ಅವುಗಳ ಪ್ರಭಾವಕ್ಕೊಳಗಾದ ಆಹಾರಜೀರ್ಣನಾಳದ ಲೋಳ್ಪರೆಯ ಪ್ರದೇಶದಲ್ಲಿ ಹುಣ್ಣುಗಳು ಗೋಚರಿಸುತ್ತವೆ. ಮುಖ್ಯವಾಗಿ ಜಠರ ಮತ್ತು ಸಣ್ಣ ಕರುಳಿನ ಆದಿಭಾಗದಲ್ಲಿ ಹರಡಿರುವ ಲೋಳ್ಪರೆ ತನ್ನ ಸುಸ್ಥಿತಿಯನ್ನು ಕಳೆದುಕೊಂಡು ನಿರ್ಜೀವತ್ವವನ್ನು ಹೊಂದಿ ಜಠರಾಗ್ನಿಯ ಪ್ರಭಾವಕ್ಕೆ ಸುಲಭವಾಗಿ ಬಲಿಯಾಗಿ ಹುಣ್ಣನ್ನು ಹೊಂದುತ್ತದೆ. ಈ ರೋಗದಲ್ಲಿ ಹೊಟ್ಟೆಯ ನೋವು ಗಡಿಯಾರದ ಕ್ರಮಬದ್ಧತೆಯ ರೀತಿಯಂತೆ ತೋರಿಬರುವ ಪ್ರಮುಖ ಲಕ್ಷಣ.

ಈ ರೋಗವು ಜೀರ್ಣನಾಳದ ಕೇವಲ ಒಂದು ಪ್ರದೇಶಕ್ಕೆ ಪರಿಮಿತವಾಗಿಲ್ಲ; ಅದು ನಮ್ಮ ನಾಗರಿಕತೆಯ ಒತ್ತಡದ ಫಲ

ವಾಗಿ ತೋರಿಬರುವ ದೈಹಿಕ, ಮಾನಸಿಕ ಹಾಗೂ ರಸಾಯನ ಪ್ರತಿಕ್ರಿಯೆಗಳ ಫಲವೆಂದು ಪರಿಗಣಿಸಲ್ಪಟ್ಟಿರುವುದರಿಂದ ರೋಗದ ಚಿಕಿತ್ಸೆ ಬಹುಮುಖವಾಗಿರಬೇಕಾಗಿದೆ. ಒಮ್ಮೆ ಮಾಯ್ದು ಹೋದ ಹುಣ್ಣು ಪುನರಪಿ ಬರಬಹುದಾದ ಸಂಭವ ಗಳು ವಿಪುಲವಾಗಿರುವುದರಿಂದ ಅದು ಉಂಟಾಗದಿರುವುದರ ಬಗ್ಗೆ ಸದಾ ಎಚ್ಚರಿಕೆಯನ್ನು ಹೊಂದಿರಬೇಕು.

ಆರೋಗ್ಯದ ಸಹಭಾಗಿಗಳಾದ ಜನಸಾಮಾನ್ಯರಲ್ಲಿ ನಮ್ಮ ಜೀರ್ಣಾಂಗದ ಈ ಪ್ರಮುಖ ರೋಗದ ಬಗ್ಗೆ ತಿಳಿದುಕೊಳ್ಳ ಬೇಕೆನ್ನುವ ಕುತೂಹಲ ಬೆಳೆಯುತ್ತಿದೆ. ದೇಹಾರೋಗ್ಯಕ್ಕೆ ಬಲ ವನ್ನು ತಂದುಕೊಡುವ ಈ ಪ್ರಮುಖ ಅಂಗ ಸುಸ್ಥಿತಿಯಲ್ಲಿರ ಬೇಕಾಗಿದೆ. ಹೊಟ್ಟೆನೋವಿನಿಂದ ಬಳಲುವ ವ್ಯಕ್ತಿಯ ಜೀವನ ವೇದನಾಮಯವಾಗಿರುತ್ತದೆ. ಈ ರೋಗದ ಕಾರಣ, ಅದರ ಬೆಳವಣಿಗೆ, ಗುಣಲಕ್ಷಣಗಳು, ತೊಡಕುಗಳು, ಚಿಕಿತ್ಸೆ ಮತ್ತು ಸಲಹೆ—ಇವುಗಳ ಬಗ್ಗೆ ಪ್ರಚಲಿತವಿರುವ ವಿಷಯವನ್ನು ಈ ಪುಸ್ತಕದಲ್ಲಿ ಬರೆಯಲು ಯತ್ನಿಸಲಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಶಾಖೆಯ ಆಶ್ರಯದಲ್ಲಿ ಕೆಂಭಾವಿಯಲ್ಲಿ ಜರುಗಿದ ೧೨೦ನೆಯ ಉಪನ್ಯಾಸ ಶಿಬಿರದಲ್ಲಿ 'ಹೊಟ್ಟೆಯ ಹುಣ್ಣು'ನ ಬಗ್ಗೆ ನಾನು ಮಾಡಿದ ಉಪನ್ಯಾಸ ಇದೀಗ ಪುಸ್ತಕ ರೂಪದಲ್ಲಿ ಪ್ರಕಟ ಗೊಳ್ಳುತ್ತಿದೆ. ಇದಕ್ಕೆ ಕಾರಣರಾದ, ಈ ಶಾಖೆಯ ನಿರ್ದೇಶಕ

ರಾದ ಶ್ರೀ ಚೆನ್ನವೀರ ಕಣವಿಯವರಿಗೆ ನಾನು ಕೃತಜ್ಞನಾಗಿದ್ದೇನೆ. ಈ ಪುಸ್ತಕವನ್ನು ಪ್ರಕಟಿಸಲು ಅನುಮತಿಯನ್ನಿತ್ತ ಪ್ರಿನ್ಸಿಪಾಲ್ ಡಾ॥ ಕೆ. ಜಿ. ಹೆಬ್ಳೀಕರ್ ಅವರಿಗೆ ಮತ್ತು ಇದನ್ನು ಪ್ರಕಾಶಿಸುತ್ತಿರುವ ವಿಶ್ವವಿದ್ಯಾಲಯದ ರಜಿಸ್ಟ್ರಾರ್ ಶ್ರೀ ಎಸ್. ಎಸ್. ಒಡೆಯರ್ ಅವರಿಗೂ ನನ್ನ ನೆನಕೆಗಳನ್ನು ಸಲ್ಲಿಸುತ್ತೇನೆ.

ಡಿಪಾರ್ಟಮೆಂಟ ಆಫ್ ಮೆಡಿಸಿನ್, ಪಿ. ಎಸ್. ಶಂಕರ್
ಮೆಡಿಕಲ್ ಕಾಲೇಜು, ಗುಲಬರ್ಗಾ
ಸಪ್ಟೆಂಬರ್ ೬, ೧೯೬೮

ಪರಿವಿಡಿ

ಹೊಟ್ಟೆಯ ಹುಣ್ಣು

೧. ಪೀಠಿಕೆ

ದೇಹಕ್ಕೆ ಬೇಕಾಗುವ ಶಕ್ತಿ ಆಹಾರದಿಂದ ದೊರೆಯುತ್ತದೆ. ನಮ್ಮ ಜೀರ್ಣಾಂಗಗಳಲ್ಲಿ ಪ್ರಮುಖವಾದ ಜಠರ ಕೋಶ ಮತ್ತು ಸಣ್ಣ ಕರುಳು ಸ್ರವಿಸುವ ರಸವಿಶೇಷಗಳು ನಾವು ಸೇವಿಸುವ ಆಹಾರ ಮತ್ತು ಪಾನೀಯಗಳನ್ನು ಜೀರ್ಣಿಸಿ, ಅವುಗಳ ಮೂಲಭೂತ ಅಂಶಗಳನ್ನಾಗಿ ಪರಿವರ್ತಿಸಿ, ಹೀರಿಕೊಂಡು ದೇಹದ ಬೆಳವಣಿಗೆಗೆ, ವಿವಿಧ ಅಂಗಗಳ ಸುಧಾರಣೆಗೆ ಮತ್ತು ಬದಲಾವಣೆಗೆ ಉಪಯೋಗಿಸಿಕೊಳ್ಳುತ್ತವೆ.

ಜಠರಕೋಶವು ಆಹಾರವನ್ನು ಮಸೆದು, ಕಡೆದು ಮೆತ್ತಗೆ ಮಾಡಿ ಹೈಡ್ರೋಕ್ಲೋರಿಕ್ ಆಮ್ಲದ ಸಮ್ಮುಖದಲ್ಲಿ ಜೀರ್ಣಕದೊಡನೆ ಪರಿಪೂರ್ಣವಾಗಿ ಮಿಶ್ರಗೊಳಿಸಿ, ಆಹಾರದ ಸಸಾರಜನಕ ಪದಾರ್ಥಗಳ (Proteins) ಜೀರ್ಣಕ್ರಿಯೆಯ ಪ್ರಾರಂಭವನ್ನು ಮಾಡುತ್ತದೆ. ಆಹಾರದಲ್ಲಿನ ಉಷ್ಣತೆ, ರಸಾಯನಗಳ

ಮತ್ತು ಒರಟಾದ ಪದಾರ್ಥಗಳಿಂದ ಸಣ್ಣ ಕರುಳಿನ ಲೋಳ್ಪರೆ (mucous membrane) ಘಾಸಿಗೊಳ್ಳಬಹುದಾದ್ದರಿಂದ ಜಠರವು (Stomach) ಆಹಾರದ ಕೋಶಾಗಾರವಾಗಿ, ಆಹಾರ ಪದಾರ್ಥಗಳ ಉಷ್ಣತೆಯನ್ನು ದೈಹಿಕ ಉಷ್ಣತೆಗೆ ತರುತ್ತದೆ; ರಸಾಯನ ಪದಾರ್ಥಗಳ ಸಾಂದ್ರತೆಯನ್ನು ಕಡಿಮೆ ಮಾಡುತ್ತದೆ; ಗಟ್ಟಿಯಾದ ಪದಾರ್ಥಗಳನ್ನು, ಅರೆಬರೆ ಜಗಿದ ಪದಾರ್ಥಗಳನ್ನು ಮೆತ್ತಗೆ ಮಾಡುತ್ತದೆ. ತನ್ನ ಪ್ರಬಲ ಆಮ್ಲ ವಿಶೇಷದಿಂದ ರೋಗಾಣು ಜೀವಿಗಳನ್ನು ನಿರ್ನಾಮ ಮಾಡುತ್ತದೆ.

ಹಗಲೂ-ರಾತ್ರಿಯೆನ್ನದೆ ಜಠರಕೋಶ ಆಮ್ಲ (acid) ವನ್ನು ಸಿದ್ಧಗೊಳಿಸುತ್ತದೆ. ಅಲ್ಲಿ ಉತ್ಪಾದನೆಯಾಗುವ ಆಮ್ಲದ ಪ್ರಮಾಣ ಸಂದರ್ಭಗಳಿಗನುಸಾರವಾಗಿ ಪ್ರಮಾಣದಲ್ಲಿ ಬದಲಾವಣೆಯನ್ನು ಹೊಂದುತ್ತಲೇ ಇರುತ್ತದೆ. ನಮ್ಮ ಜಠರವು ಬಹು ಸೂಕ್ಷ್ಮವಾದ ಅಂಗ. ತನ್ನ ಸುತ್ತಲಿನ ಆವರಣದಲ್ಲಿ ಏನಾದರೂ ತೊಂದರೆಯುಂಟಾದರೆ, ಮನಸ್ಸು ಘಾತಗೊಂಡಾಗ, ತನ್ನ ಶೋಕಪ್ರದರ್ಶನವನ್ನು ವಿಪುಲವಾಗಿ ಆಮ್ಲವನ್ನು ಸ್ರವಿಸುವುದರ ಮೂಲಕ ಮಾಡುತ್ತದೆ.

ಜಠರ ರಸದಲ್ಲಿ ಆಮ್ಲ ಮತ್ತು ಜೀರ್ಣಕ (Pepsin) ಪ್ರಬಲ ವಸ್ತುಗಳಾಗಿದ್ದು, ಅದು ಜೀವಕಣಗಳನ್ನು (Cells) ದಹಿಸಬಹುದಾದ್ದರಿಂದ ಅದರ ಪ್ರಭಾವ ವಿಪುಲವಾಗಿ ಬೀಳುವ ಜಠರ ಮತ್ತು ಸಣ್ಣ ಕರುಳಿನ ಆದಿಭಾಗದಲ್ಲಿನ ಲೋಳ್ಪರೆ ಬಲ

ಶಾಲಿಯಾಗಿರಬೇಕಾಗುತ್ತದೆ. ಅದು ತನ್ನ ಸುಸ್ಥಿತಿಯನ್ನು ಕಳೆದುಕೊಂಡು ನಿರ್ಜೀವತ್ವವನ್ನು ಹೊಂದಿದಾಗ ಆಮ್ಲದ ಜೀರ್ಣಕ್ರಿಯೆಯ ಪ್ರಭಾವಕ್ಕೆ ಒಳಗಾಗಿ, ಹುಣ್ಣು ಉದ್ಭವವಾಗುತ್ತದೆ. ಆ ಹುಣ್ಣೇ ಹೊಟ್ಟೆಯ ಹುಣ್ಣು (Peptic ulcer).

೨. ಕಾರಣ ಮತ್ತು ಬೆಳವಣಿಗೆ

ಎಲ್ಲೆಲ್ಲಿ ಜಠರರಸ (gastric juice) ದ ಪ್ರಭಾವ ಆಹಾರ ಜೀರ್ಣನಾಳ (digestive system) ದಲ್ಲಿ ಬೀಳ ಬಹುದೋ ಅಲ್ಲೆಲ್ಲ ಹುಣ್ಣು ಉದ್ಭವವಾಗಬಹುದಾಗಿದೆ. ಸಾಮಾನ್ಯವಾಗಿ ಹುಣ್ಣು ಜಠರ (ಅನ್ನಕೋಶ, ಉದರ, stomach) ಮತ್ತು ಸಣ್ಣ ಕರುಳಿನ ಅತ್ಯಂತ ಆದಿಭಾಗದಲ್ಲಿ ತೋರಿಬರುತ್ತದೆ. ಈ ಪ್ರದೇಶಗಳಲ್ಲದೆ ಅಪರೂಪವಾಗಿ ಹುಣ್ಣು ಇನ್ನು ಮೂರು ಪ್ರದೇಶಗಳಲ್ಲಿ ತೋರಿಬರಬಹುದಾಗಿದೆ. ಆಹಾರ ಅನ್ನಕೋಶಕ್ಕೆ ಹೋದ ಮೇಲೆ, ಅದು ಹಿಂದಕ್ಕೆ ಬಾರದಂತೆ ತಡೆಯಬಲ್ಲ ಕವಾಟಸ್ನಾಯು (Sphincter) ಬಲಶಾಲಿಯಾಗಿಲ್ಲದೆ, ಜಠರರಸ ಹಿಂದಕ್ಕೇರಿ ಅಲ್ಲಿಯ ಲೋಳ್ಪರೆಯ ಮೇಲೆ ಪ್ರಭಾವ ಬೀರಿದಾಗ ಹುಣ್ಣು ಅನ್ನನಾಳ (Oesophagus) ದ ಅಂತ್ಯಭಾಗದಲ್ಲಿ ಬರಬಹುದು. ಅಲ್ಲದೆ ಹೊಟ್ಟೆಯ ಹುಣ್ಣಿನಿಂದ ಪೂರ್ಣವಾಗಿ ಸ್ವಾತಂತ್ರ್ಯವನ್ನು ಪಡೆಯಲು ನಡೆಸಿದ ಶಸ್ತ್ರಚಿಕಿತ್ಸೆ ಕಲ್ಪಿಸಿದ ಜಠರಕೋಶ ಮತ್ತು ಸಣ್ಣ ಕರುಳಿನ ಜೋಡಣೆಯ ನಂತರ ಹುಣ್ಣು ಸಣ್ಣ ಕರುಳಿ

ನಲ್ಲಿ ಉದ್ಭವವಾಗಬಹುದು. ಅಲ್ಲದೆ ಹುಟ್ಟಿನೊಡನೆ ಸಣ್ಣ ಕರುಳಿನಿಂದ ಹೊರಬಂದ ಮೆಕೆಲ್ ಉಪಶಾಖೆ (diverti-culum) ಯಲ್ಲಿನ ಲೋಳ್ಪರೆ ಜಠರಕೋಶದಲ್ಲಿರುವಂತಹ ರಸೋತ್ಪಾದಕ ಜೀವಕಣಗಳನ್ನು ಹೊಂದಿರುವುದರಿಂದ ಅಲ್ಲಿಯೂ ಹುಣ್ಣುಗಳು ಗೋಚರಿಸಬಹುದು.

ಪಚನ ಶಕ್ತಿಯನ್ನು ಪಡೆದ ಜಠರರಸದ ಪ್ರಭಾವಕ್ಕೆ ಒಳಗಾದ ಲೋಳ್ಪರೆಯಲ್ಲಿ ಹುಣ್ಣುಗಳು ಗೋಚರವಾಗುತ್ತವೆ. ಹೊಟ್ಟೆಯ ಹುಣ್ಣು ಜಠರರಸದಲ್ಲಿ ಆಮ್ಲ ಇದ್ದಾಗ ಮಾತ್ರ ಉದ್ಭವವಾಗಬಲ್ಲುದೆಂಬ ಅಂಶ ಸಿದ್ಧವಾದ ಸಂಗತಿ. ಎಲ್ಲಿ ಆಮ್ಲದ ಅಭಾವ ಇರುವುದೋ ಅಲ್ಲಿ ಹುಣ್ಣುಗಳು ಉಂಟಾಗುವುದಿಲ್ಲ.

ಹೊಟ್ಟೆ ಮತ್ತು ಹನ್ನೆರಡು ಬೆರಳಗಲದಷ್ಟು ಉದ್ದವಾದ ಸಣ್ಣ ಕರುಳಿನ ಆದಿಭಾಗವಾದ ವಕ್ರಗರುಳು (deodenum) ಒಂದೇ ರೀತಿಯ ಜೀವಕಣಗಳಿಂದ ಬೆಳವಣಿಗೆ ಹೊಂದಿವೆ. ಆ ಪ್ರದೇಶಕ್ಕೆ ಆಗುವ ರಕ್ತಪೂರೈಕೆ ಒಂದೇ ರಕ್ತನಾಳ ಸಮುದಾಯದಿಂದ ಆಗುತ್ತದೆ. ವಕ್ರಗರುಳಿನ ದ್ವಿತೀಯಾರ್ಧದಲ್ಲಿ ಪಿತ್ತರಸ (bile juice) ಮತ್ತು ಮೇದೋಜೀರಕ ರಸ (pancreatic juice) ದ ನಾಳಿಗಳು ಬಾಯ್ದೆರೆದು ಕ್ಷಾರ (alkali) ಗುಣವನ್ನು ಹೊಂದಿದ ರಸವನ್ನು ಕರುಳಿಗೆ ಸೇರಿಸುತ್ತವೆ. ಸಾಮಾನ್ಯವಾಗಿ ಕರುಳಿನಲ್ಲಿ ಆಗುವ ಹುಣ್ಣುಗಳು ವಕ್ರ

ಗರುಳಿನ ಪ್ರಥಮ ಇಂಚಿನಷ್ಟು ಪ್ರದೇಶದಲ್ಲಿ ಆಗುವುದರಿಂದ ಆ ಪ್ರದೇಶ ಜಠರರಸದ ಪ್ರಭಾವಕ್ಕೆ ಒಳಗಾಗಿದೆ.

ಜಠರದ ಮುಖ್ಯ ಭಾಗವೇ ಅದರ ಕೋಶ. ಇದು ಕಿರಿದಾದ ಜಠರನಾಳ (Pylorus) ದ ಮೂಲಕ, ತನ್ನ ವಿಸ್ತರಣದಂತಿರುವ ವಕ್ರಗರುಳನ್ನು ಸೇರುತ್ತದೆ. ಮೇಲ್ಗಡೆ ಈ ಕೋಶವು ವಕ್ರವಾಗಿ ಬಾಗಿ ಅನ್ನನಾಳದೊಡನೆ ಸಂಬಂಧವನ್ನು ಪಡೆದಿದೆ.

ಜಠರಕೋಶದ ಮುಖ್ಯ ಭಾಗದಲ್ಲಿ ಜಠರರಸ ಉತ್ಪತ್ತಿಯಾಗುತ್ತದೆ. ಅಲ್ಲಿರುವ ಲೋಳ್ಪರೆಯು ಆಳವಾಗಿಳಿದು ಒಳಗೆ ಗ್ರಂಥಿ (gland) ಗಳ ರೂಪದಲ್ಲಿ ಬೆಳೆದಿದೆ. ಅಲ್ಲಿರುವ ಮೂರು ತೆರನಾದ ಜೀವಕಣಗಳು ವಿವಿಧ ರಸವನ್ನು ಉತ್ಪಾದನೆ ಮಾಡುತ್ತವೆ. ಆ ರಸವಿಶೇಷವೇ ಜಠರರಸ. ಆಮ್ಲಕಣ (oxyntic cells) ಗಳು ಪ್ರಬಲವಾದ ಹೈಡ್ರೋಕ್ಲೋರಿಕ್ ಆಮ್ಲವನ್ನು ಉತ್ಪಾದಿಸುವ ಆಮ್ಲಬುಗ್ಗೆಗಳಾಗಿವೆ. ಅವುಗಳ ಸಂಖ್ಯೆ ವಿಪುಲವಾಗಿದೆ. ಅಲ್ಲದೆ ಕಾಲಕಾಲಕ್ಕೆ ರಸವನ್ನು ಸಿದ್ಧ ಮಾಡಿ ಹೊರಹಾಕಬಲ್ಲ ಜೀವಕಣಗಳ ಸಂಖ್ಯೆ ಬದಲಾವಣೆಯನ್ನು ಹೊಂದುತ್ತಲೇ ಇರುತ್ತದೆ. ಹಿಸ್ಟಮೀನ್‌ದ ಪ್ರಭಾವದಿಂದ ಎಲ್ಲ ಕಣಗಳೂ ಆಮ್ಲ ತಯಾರಿಕೆಯ ಚಟುವಟಿಕೆಯಲ್ಲಿ ತೊಡಗಬಹುದಾಗಿದೆ. ಅಲ್ಲಿರುವ ಮುಖ್ಯ ಕಣಗಳು (chief cells) ಗ್ರಂಥಿಯ ಬಹುಭಾಗವನ್ನು ಆಕ್ರಮಿಸಿ, ಜೀರ್ಣಕವನ್ನು

ಸಿದ್ಧಗೊಳಿಸುತ್ತವೆ. ಇವುಗಳಲ್ಲದೆ ಗ್ರಂಥಿಯ ಆದಿಭಾಗದಲ್ಲಿರುವ ಲೋಳ್ಕಣಗಳು (mucin producing cells) ಲೋಳೆಯಂತಹ ಪದಾರ್ಥವನ್ನು ಹೊರಹಾಕಿ ಜಠರಕೋಶದೊಳಗೆ ರಕ್ಷಣಾತೆರೆಯನ್ನು ಹಾಸಲು ಸಹಕಾರಿಯಾಗಿವೆ. ಜಠರದಲ್ಲಿ ಸ್ರವಿಸಲ್ಪಡುವ ರಸದಲ್ಲಿ ಸೋಡಿಯಂ, ಪೊಟ್ಯಾಸಿಯಂ, ಮ್ಯಾಗ್ನೀಶಿಯಂ ಮತ್ತು ಕ್ಯಾಲ್ಸಿಯಂ ಧಾತುಗಳು ಅಡಕವಾಗಿರುತ್ತವೆ. ಇಲ್ಲಿನ ಗ್ರಂಥಿಗಳೇ ಬೆಳವಣಿಗೆ ಹೊಂದಿದ ರಕ್ತಕಣಗಳು ಪಕ್ವ (mature) ವಾಗಲು ಆಗತ್ಯವಾದ ಅಂಶವನ್ನು ಹೀರಿಕೊಳ್ಳಲು ಸಹಾಯಕವಾದ ಅಂತರ್ಗತ ಅಂಶ(Intrinsic factor) ವನ್ನು ಸಿದ್ಧಗೊಳಿಸುವುದು. ಜಠರರಸದಲ್ಲಿ ಪ್ರಬಲವಾದ ಆಮ್ಲ ಇರುವುದರಿಂದಲೇ ಅದು ಜೀವಾಣುರೋಧಕವಾಗಿ ಕೆಲಸ ಮಾಡಿ ದೇಹದಲ್ಲಿ ರೋಗಾಣುಗಳು ಬೆಳವಣಿಗೆ ಹೊಂದುವುದನ್ನು ಪ್ರತಿಬಂಧಿಸಲು ಸಹಕಾರಿಯಾಗಿದೆ.

ಜಠರನಾಳದಲ್ಲಿನ ಕಣಗಳು ದ್ರಾಕ್ಷಿ ಗೊಂಚಲಿನಂತಹ ಗ್ರಂಥಿಗಳಂತೆ (racemose glands) ಹರಡಿಕೊಂಡು ಕ್ಷಾರ ಗುಣವನ್ನು ಹೊಂದಿದ ರಸವನ್ನು ಸಿದ್ಧಪಡಿಸುತ್ತವೆ. ಇದರಲ್ಲಿ ಲೋಳೆಯಂತಹ ಪದಾರ್ಥ ಹೆಚ್ಚಿನ ಪ್ರಮಾಣದಲ್ಲಿದ್ದು ಜೀರ್ಣ ಕ್ರಮಕ್ಕೆ ಸಹಾಯಕವಾದ ಕಿಣ್ವಗಳ (enzymes) ಅಭಾವ ಆ ರಸದಲ್ಲಿರುತ್ತದೆ.

ಜಠರರಸದ ಉತ್ಪತ್ತಿ ನರ ಪ್ರೇರಣೆ ಮತ್ತು ರಸದ್ರಾವ (hormones) ದ ಪ್ರಭಾವಕ್ಕೆ ಒಳಗಾಗಿದೆ. ಮನಸ್ಸು, ಜಠರ

ಮತ್ತು ಕರುಳು–ಈ ಮೂರು ಘಟ್ಟಗಳಲ್ಲಿ ಜಠರ ರಸದ ಉತ್ಪಾದನಾ ಚಟುವಟಿಕೆ ಜರುಗುತ್ತವೆ. ಹೆಚ್ಚು ರಸೋತ್ಪಾದನೆ ಮೊದಲಿನ ಎರಡು ಹಂತಗಳಲ್ಲಿ ಆಗುತ್ತದೆ. ನಮ್ಮ ಇಂದ್ರಿಯುಗಳಾದ ಕಣ್ಣು, ನಾಲಿಗೆ, ಕಿವಿ ಮತ್ತು ಮೂಗು ಇವುಗಳ ಮೂಲಕ ದೊರಕುವ ದೃಷ್ಟಿ, ರುಚಿ, ಕೇಳುವಿಕೆ ಮತ್ತು ವಾಸನೆ ಹಾಗೂ ರುಚಿಕರ ಆಹಾರದ ಬಗ್ಗೆ ವಿಚಾರ ಮಾಡುವಿಕೆ ರಸದ ಉತ್ಪಾದನೆಗೆ ಚೇತನವನ್ನುಂಟು ಮಾಡುತ್ತವೆ. ಈ ಪ್ರತಿಕ್ರಿಯೆಗಳು ಮೆದುಳಿನ ಮಧ್ಯ ಭಾಗದಲ್ಲಿರುವ ಶಯಾ ಕೇಂದ್ರದ ಕೆಳಗಂಟಿನ (hypothalamus) ಮೇಲೆ ಪ್ರಭಾವ ಬೀರುತ್ತವೆ. ಅಲ್ಲಿಂದ ದೊರಕುವ ಉದ್ದೀಪನಾ ಶಕ್ತಿಯು ಸಂಚಾರಿನರ (vagus nerve) ದ ಮೂಲಕ ಜಠರದಲ್ಲಿನ ಗ್ರಂಥಿಗಳ ಮೇಲೆ ಬೀರಲ್ಪಡುತ್ತದೆ.

ಈ ನರವನ್ನು ಕತ್ತರಿಸಿದರೆ ಜಠರದಲ್ಲಿ ಉಂಟಾಗುವ ಮನೋರಸೋತ್ಪಾದನೆಯು ನಿಲುಗಡೆಯಾಗುವುದು. ಅದು ಉಳಿದ ಘಟ್ಟಗಳ ಮೇಲೆ ಪರಿಣಾಮವನ್ನು ಬೀರದು. ಆದರೂ ಅದರ ಫಲವಾಗಿ ಜಠರ ರಸದ ಉತ್ಪತ್ತಿಯಲ್ಲಿ ಅರ್ಧದಷ್ಟು ಇಳುವರಿಯಾಗುವುದು. ಅದೆಲ್ಲ ಹೈಡ್ರೋಕ್ಲೋರಿಕ್ ಆಮ್ಲದ ತಯಾರಿಕೆಗೆ ಸಂಬಂಧಿಸಿದುದು. ನರಚೇತನ (impulse) ಬಂದಾಗ ಅಲ್ಲಿ ಹೊರಹೊಮ್ಮುವ ಅಸಿಟೈಲ್ ಖೋಲಿನ್ ರಸಾಯನ ವಸ್ತು ಆಮ್ಲಕಣಗಳ ಕಾರ್ಯ ಚಟುವಟಿಕೆಗೆ ಉತ್ತೇಜನ ನೀಡುವುದು ಮತ್ತು ಜಠರದಲ್ಲಿ

ಸ್ನಾಯುವಿಗೆ ತೀವ್ರಗತಿಯ ಸಂಕುಚನ ಶಕ್ತಿಯನ್ನು ನೀಡುವುದು. ಅಸಿಟೈಲ್ ಖೋಲಿನ್ ವಸ್ತುವಿನೊಡನೆ ಸ್ಪರ್ಧಿಸಿ ಅದರ ಪ್ರಭಾವವನ್ನು ಹಾಳುಗೆಡವಬಲ್ಲ ಬ್ಯಾಂಥೀನ್ ವಸ್ತು ಸೇವನೆಯ ನಂತರ ರಸದ ಉತ್ಪಾದನೆಯನ್ನು ತಗ್ಗಿಸಬಹುದಾಗಿದೆ.

ನಮ್ಮ ಮನೋವಿಕಾರಗಳು ಆಮ್ಲದ ಪ್ರಮಾಣವನ್ನು ಪರಿಣಾಮಕಾರಿಯಾಗಿ ಬದಲಿಸ ಬಲ್ಲವು. ಅದೇ ಕಾರಣಗಳು ಅನ್ನಾಶಯದ ಸಂಕುಚನ ಕ್ರಿಯೆ ಮತ್ತು ಲೋಳ್ಪರೆಗೆ ಆಗುವ ರಕ್ತ ಪೂರೈಕೆಯನ್ನು ಅಂಕೆಯಲ್ಲಿಡಲೂ ಬಲ್ಲವು. ಎರಡನೇ ಘಟ್ಟದಲ್ಲಿ ಸಿದ್ಧವಾಗುವ ಜಠರ ರಸದ ಉತ್ಪಾದನೆಗೆ ಸೇವಿಸಿದ ಆಹಾರ ಜಠರ ನಾಳದಲ್ಲಿರುವುದೇ ಮುಖ್ಯ ಕಾರಣ. ಅದರ ಇರುವಿಕೆಯಿಂದ ಸಿದ್ಧವಾಗುವ ರಸದೂತ ಜಠರಾಂಶ (gastrin), ಹೈಡ್ರೋಕ್ಲೋರಿಕ್ ಆಮ್ಲದ ತಯಾರಿಕೆಗೆ ಉತ್ತೇಜನ ಕೊಡುವುದು. ಆಗ ಉತ್ಪತ್ತಿಯಾಗುವ ಜಠರ ರಸದ ಪ್ರಮಾಣವು ಮನೋರಸದಷ್ಟೇ ಪ್ರಮಾಣದ್ದಾಗಿರುತ್ತದೆ. ತೃತೀಯ ಹಂತದಲ್ಲಿ ಉತ್ಪಾದನೆಯಾಗುವ ಜಠರ ರಸದ ಪ್ರಮಾಣ ಕಡಿಮೆ, ಮತ್ತು ಅದರ ತಯಾರಿಕೆ ಅನ್ನರಸ ಕರುಳನ್ನು ಸೇರಿದ ಮೇಲೆ ಉದ್ಭವವಾಗುತ್ತದೆ.

ಜಠರವು ಆಹಾರ ಜೀರ್ಣ ಹೊಂದುವ ಕ್ರಮದ ಪ್ರಾರಂಭವನ್ನು ಮಾಡುತ್ತದೆ. ಇಲ್ಲಿ ಆಹಾರವು ಎರಡು ಘಂಟೆಗಳಷ್ಟು ಕಾಲ ಇರುವುದರಿಂದ ಸೇವಿಸಿದ ಆಹಾರ

ರಸಾಯನಿಕವಾಗಿ ಜಠರ ರಸದ ಪ್ರಭಾವಕ್ಕೆ ಮತ್ತು ಯಾಂತ್ರಿಕ ವಾಗಿ ಜಠರದ ಸ್ನಾಯುವಿನ ಸಂಕುಚನ ಕ್ರಿಯೆಗೆ ಒಳಗಾಗಿ, ಮೃದುವಾಗಿ ಕರುಳಿನಲ್ಲಿ ಪೂರ್ಣವಾಗಿ ಜೀರ್ಣಹೊಂದಲು ಸಹ ಕಾರಿಯಾಗಿದೆ. ಆಹಾರದಲ್ಲಿನ ಸಸಾರಜನಕ ಪದಾರ್ಥಗಳು ಆಮ್ಲದ ಎದುರಿನಲ್ಲಿ ಜೀರ್ಣಕದೊಡನೆ ಸಂಯೋಗ ಹೊಂದಿ ಪಚನಕ್ರಿಯೆಯ ಪ್ರಥಮ ಹಂತವನ್ನು ದಾಟುವುದು. ಹೀಗೆ ಸಿದ್ಧಪಡಿಸಲ್ಪಟ್ಟ ಆಹಾರವು ಸ್ವಲ್ಪ ಸ್ವಲ್ಪ ಪ್ರಮಾಣದಲ್ಲಿ ಜಠರದಿಂದ ಕರುಳನ್ನು ಸೇರುತ್ತದೆ.

ಪಚನ ಶಕ್ತಿಯನ್ನು ಪಡೆದ ಜಠರ ರಸದ ಪ್ರಭಾವಕ್ಕೆ ಒಳಗಾದ ಲೋಳ್ಪರೆಯಲ್ಲಿ ಹುಣ್ಣುಗಳು ಗೋಚರವಾಗಬಲ್ಲವು. ಈ ಹುಣ್ಣುಗಳು ಆಮ್ಲ ಮತ್ತು ಜೀರ್ಣಕ ವಸ್ತುಗಳು ಸಿದ್ಧ ವಾಗುವ ಜಠರದ ಪ್ರದೇಶದಲ್ಲಿ ತೋರಿಬಾರದೆ ಅವುಗಳು ಸಿದ್ಧ ವಾಗದ ಸುತ್ತಲಿನ ಇತರ ಪ್ರದೇಶಗಳಲ್ಲಿ ಕಂಡುಬರುತ್ತವೆ. ನಮ್ಮೆಲ್ಲರ ಜಠರದಲ್ಲಿರುವ ರಸವೇ ಜಠರಾಗ್ನಿ. ಅದು ಸಾಮಾನ್ಯ ವಾಗಿ ತನ್ನನ್ನು ತಾನೇ ದಹಿಸಿಕೊಳ್ಳುವುದಿಲ್ಲ. ಲೋಳ್ಪರೆಯಲ್ಲಿ ಕಂಡುಬರುವ ಕೆಲವೊಂದು ರಕ್ಷಣಾ ಅಂಶಗಳು ಈ ಕ್ರಿಯೆಯನ್ನು ತಡೆಗಟ್ಟುತ್ತವೆ. ಕ್ಷಾರಗುಣವನ್ನು ಹೊಂದಿದ ರಕ್ತಪರಿಚಲನೆ ಸಾಕಷ್ಟು ಪ್ರಮಾಣದಲ್ಲಿ ಜಠರಕೋಶದಲ್ಲಿ ಆಗುವುದರಿಂದ ಮತ್ತು ಲೋಳೆಯ ತೆಳ್ಳನೆಯ ಪೊರೆ ಸದಾ ಲೋಳ್ಪರೆಯ ಮೇಲೆ ಪರಡಿರುವುದರಿಂದ ಲೋಳ್ಪರೆಯು ಜಠರಾಗ್ನಿಗೆ ಬಲಿ ಯಾಗುವುದಿಲ್ಲ. ಆದುದರಿಂದಲೇ ಹೊಟ್ಟೆಯ ಹುಣ್ಣು ಅಥವಾ

ವ್ರಣದ ಉದ್ಭವದಲ್ಲಿ ಜಠರಾಗ್ನಿಯ ಪ್ರಭಾವ ಮತ್ತು ಆದರ ವಿರುದ್ಧ ಸೆಣಸುವ ಲೋಳ್ಪರೆ ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಈ ರೋಗದಲ್ಲಿ ಹೋರಾಟ ಮತ್ತು ರಕ್ಷಣೆಯ ಪ್ರಶ್ನೆ ಅಡಕವಾಗಿದೆ, ಅದು ಆಮ್ಲ–ಜೀರ್ಣಕವನ್ನೊಳಗೊಂಡ ಜಠರ ರಸದ ವಿರುದ್ಧ ಲೋಳ್ಪರೆಯ ತಡೆ.

ಈ ರೋಗ ಇದ್ದವರಲ್ಲಿ ಜಠರಕೋಶದಲ್ಲಿ ಆಮ್ಲಕಣಗಳು ಸಿದ್ಧಗೊಳಿಸಿ ಸ್ರವಿಸುವ ಹೈಡ್ರೋಕ್ಲೋರಿಕ್ ಆಮ್ಲ ಹುಣ್ಣು ಇಲ್ಲದ ಸಾಮಾನ್ಯ ಮನುಷ್ಯರ ಜಠರದಲ್ಲಿ ಉತ್ಪಾದನೆಯಾಗುವ ಆಮ್ಲದಂತೆಯೇ ಇರುತ್ತದೆ. ಅದು ಪ್ರಬಲ ಶಕ್ತಿಯಿಂದ ಗಟ್ಟಿಯಾಗಿ ಇರುವುದಿಲ್ಲ. ಆದರೆ ಅದರ ಪ್ರಮಾಣ ಕರುಳಿನ ಹುಣ್ಣು ಇರುವವರಲ್ಲಿ ಜಾಸ್ತಿಯಾಗಿರುತ್ತದೆ. ಆಮ್ಲದ ಹೆಚ್ಚುವರಿ ಕರುಳು ಹುಣ್ಣು ಆಗುವಿಕೆಯಲ್ಲಿ ಬಹು ಮುಖ್ಯ ಅಂಶ. ಜಠರ ರಸ ಸದಾಕಾಲ ಉತ್ಪಾದನೆಯಾಗುತ್ತಿರುತ್ತದೆ. ದಿನಕ್ಕೆ ಎರಡು ಅಥವಾ ಮೂರು ಲೀಟರ್‌ನಷ್ಟು ಜಠರರಸ ಉತ್ಪಾದನೆಯಾಗುತ್ತದೆ. ಉಣ್ಣಲಿ ಉಣ್ಣದೆ ಉಪವಾಸವಿರಲಿ, ಊಟದ ಮಧ್ಯದ ಅವಧಿಯಲ್ಲಿ ಹಾಗೂ ರಾತ್ರಿಯ ವೇಳೆಯಲ್ಲಿ ಸದಾ ಅದು ಸಿದ್ಧವಾಗಿ ಪ್ರವಹಿಸುತ್ತದೆ. ರಾತ್ರಿ ಮತ್ತು ಊಟಗಳ ಮಧ್ಯಂತರ ಕಾಲದಲ್ಲಿ ಜಠರಕೋಶವು ಬರಿದಾಗಿರುವ ಪ್ರಯುಕ್ತ ಹಾನಿಗೊಂಡ ಲೋಳ್ಪರೆಯ ಮೇಲೆ ಕೆಡುಕಾಗುವ ಸಂಭವ ಜಾಸ್ತಿ. ಆಹಾರ, ಕ್ಷಾರದ ಅಂಶಗಳನ್ನೊಳಗೊಂಡ ಮೇದೋಜೀರಕ ರಸ, ಪಿತ್ತರಸದ ಇರದಿರುವಿಕೆಯಿಂದ ಆಮ್ಲ

ಗುಣನಾಶಕ (neutralise)ವಾಗದೇ ಹೆಚ್ಚಿನ ಹಾನಿಯುಂಟಾಗಲು ಸಹಕಾರಿಯಾಗುತ್ತದೆ. ಕರುಳು ಹುಣ್ಣಿನಲ್ಲಿ ಜಠರರಸದ ಆಮ್ಲ ಪ್ರಮಾಣ ಹೆಚ್ಚುವುದೇ ವಿನಃ ಅದರಲ್ಲಿನ ಗುಣವಲ್ಲ. ಆದುದರಿಂದ ಇಂತಹ ಹುಣ್ಣುಗಳಲ್ಲಿ ಸಂಚಾರಿ ನರದ ಛೇದನ (vagotomy) ದಿಂದ ರಾತ್ರಿ ರಸದ ತಯಾರಿಕೆ ನಿಲುಗಡೆ ಹೊಂದಿ ಹುಣ್ಣಿನ ಆಗಮನ ಮತ್ತು ಅದರ ಮಾಯುವಿಕೆಯ ಮೇಲೆ ಪರಿಣಾಮಕಾರಿಯಾಗಿ ಪ್ರಭಾವ ಬೀರಲ್ಪಡುತ್ತದೆ. ಹುಣ್ಣಿನ ಉದ್ಭವ ಹೇಗೇ ಆಗಲಿ, ಆಮ್ಲದ ಹೆಚ್ಚಿನ ಪ್ರಮಾಣ ಹುಣ್ಣಿನ ಮಾಯುವಿಕೆಯನ್ನು ನಿಧಾನಗೊಳಿಸುತ್ತದೆ.

ನರತಂತು ಮತ್ತು ರಸದೂತದ ಉತ್ತೇಜನದ ಫಲವಾಗಿ ಹೆಚ್ಚು ಆಮ್ಲದ ತಯಾರಿಕೆ ಜಠರದಲ್ಲಿ ಉಂಟಾಗುತ್ತದೆ. ದೈನಂದಿನ ಜೀವನದ ಒತ್ತಡ (stress)ದ ಪರಿಣಾಮವಾಗಿ, ಹೆಚ್ಚು ಜವಾಬ್ದಾರಿಯನ್ನು ಹೊತ್ತು ಆಡಳಿತದ ಮುಖ್ಯ ಸ್ಥಾನಗಳನ್ನು ಹೊಂದಿರುವವರಲ್ಲಿ, ಏಕಕಾಲದಲ್ಲಿ ಅನೇಕ ಪ್ರಮುಖ ಕಾರ್ಯಭಾರಗಳನ್ನು ನಿರ್ವಹಿಸುವವರಲ್ಲಿ ಅನೇಕ ಬಾರಿ ತಮ್ಮ ಹೊಟ್ಟೆಯೊಂದಿಗೆ ಶಾಂತಿಯನ್ನು ಹೊಂದಿರುವುದಿಲ್ಲ. ಕಷ್ಟಪಟ್ಟು ಕೆಲಸ ಮಾಡುವವರು, ಹೆಚ್ಚು ಮಹತ್ವಾಕಾಂಕ್ಷೆಯುಳ್ಳವರು, ಸದಾ ಯಶಸ್ಸಿಗೆ ಬಾಯ್ದೆರೆಯುತ್ತಿರುವವರು ಈ ನೋವನ್ನು ಹೊಂದಬಹುದು. ಮನಸ್ಸಿನಲ್ಲಿ ಆಗುವ ವೈಪರೀತ್ಯಗಳ ಫಲವಾಗಿ ಹುಣ್ಣು ಅನೇಕ ಬಾರಿ ಉದ್ಭವವಾಗುವುದರಿಂದ ಇದನ್ನು ಮನೋದ್ಧೈಹಿಕ (Psycho-somatic) ರೋಗವೆಂದು ಪರಿಗಣಿಸಲ್ಪಟ್ಟಿದೆ.

ಕಳೆದ ಶತಮಾನಕ್ಕಿಂತಲೂ ಈ ಶತಮಾನದಲ್ಲಿ ಹೊಟ್ಟೆಯ ಹುಣ್ಣುಗಳು ಹೆಚ್ಚುಹೆಚ್ಚಾಗಿ ಕಾಣಬರುತ್ತಿರುವುದರಿಂದ ಇದು ನಾಗರೀಕತೆಯ ಫಲವೋ ಏನೋ ಎಂದು ತಿಳಿಯಲ್ಪಟ್ಟಿದೆ. ಕರುಳು ಹುಣ್ಣುಗಳಂತೂ ನಗರವಾಸಿಗಳಲ್ಲಿ ಹೆಚ್ಚಾಗಿ ತೋರಿ ಬರುವುದರಿಂದ ಅದು ನಾಗರಿಕತೆಯ ಲಕ್ಷಣವಾಗಿದೆ. ಹೊಟ್ಟೆಯ ಹುಣ್ಣು ಬರೀ ಜಠರ ಅಥವಾ ಕರುಳಿನ ಒಂದು ಪ್ರದೇಶದಲ್ಲಿ ಒತ್ತಟ್ಟಿಗೆ ಕಾಣಬರುವ ರೋಗವಲ್ಲ. ಅದು ನಮ್ಮ ನಾಗರಿಕತೆಯ ಒತ್ತಡದಿಂದ ಆಗುವ ದೈಹಿಕ, ಮಾನಸಿಕ ಹಾಗೂ ರಾಸಾಯನಿಕ ಪ್ರತಿಕ್ರಿಯೆಗಳಿಂದಾದ ಫಲ. ನಮ್ಮಲ್ಲಿ ಉಂಟಾಗುವ ವ್ಯಾಕುಲತೆ, ಹೊಟ್ಟೆಕಿಚ್ಚು, ಸಿಟ್ಟು, ಹಗೆತನ, ಕುತೂಹಲ, ಆರ್ಥಿಕ ಚಿಂತೆ, ಆಶಾಭಂಗವಾಗುವ ಪ್ರಮೇಯಗಳು, ಸ್ಪರ್ಧಾ ಮನೋಭಾವ, ಮುಂಗೋಪ, ಮನಸ್ಸಿಗೆ ಹಚ್ಚಿಕೊಳ್ಳುವಿಕೆ—ಜಠರದ ಆಮ್ಲಪ್ರಮಾಣವನ್ನು ಹೆಚ್ಚುವರಿಗೊಳಿಸಬಲ್ಲವು.

ಜಠರದ ಹುಣ್ಣಿನಲ್ಲಿ ಉತ್ಪಾದಿತವಾಗುವ ಆಮ್ಲದ ಪ್ರಮಾಣ ಹೆಚ್ಚಿರುವುದಿಲ್ಲ. ಅದಕ್ಕಾಗಿಯೇ ಅಲ್ಲಿ ಆಮ್ಲದ ಪ್ರಭಾವದಿಂದ ಹುಣ್ಣು ಉದ್ಭವವಾಗುವುದಕ್ಕಿಂತಲೂ ಇತರ ಕಾರಣಗಳು ಲೋಳ್ಪರೆಯ ಮೇಲೆ ಪ್ರಭಾವ ಬೀರಿ ಅದರ ಭದ್ರತೆಯನ್ನು ಸಡಿಲಗೊಳಿಸಿ ಅಶಕ್ತಗೊಳಿಸುತ್ತಿರಬೇಕೆಂದು ತಿಳಿಯಲಾಗಿದೆ. ನಷ್ಟಗೊಂಡ ಲೋಳ್ಪರೆಯು ಆಮ್ಲ-ಜೀರ್ಣಕದ ಪ್ರಭಾವವನ್ನು ಎದುರಿಸಲಾಗುವುದಿಲ್ಲ.

ಜಠರ ಕೋಶದಲ್ಲಿನ ಲೋಳ್ಪರೆಯ ಮೇಲೆ ಹರಡಿರುವ ಲೋಳೆಯಂತಹ ಪದಾರ್ಥದ ತೆರೆ ಜಠರ ರಕ್ಷಣೆಯ ಪ್ರಥಮ ಅಸ್ತ್ರ. ಜೀವಂತ ಇರುವ ಲೋಳ್ಪರೆಯ ಕಣಗಳು ಜೀರ್ಣ ಗೊಳ್ಳುವುದಿಲ್ಲ. ಆಹಾರದ ನ್ಯೂನತೆಯಿಂದ ಲೋಳ್ಪರೆಯಲ್ಲಿನ ಜೀವಕಣಗಳ ಬೆಳವಣಿಗೆ ಮತ್ತು ಅವುಗಳ ಭದ್ರತೆಗೆ ಕುಂದುಂಟಾಗಬಹುದು. ನಮ್ಮ ದೇಶದಲ್ಲಿ ದಕ್ಷಿಣಭಾರತ ದಲ್ಲಿಯೇ ಹೊಟ್ಟೆಯ ಹುಣ್ಣುಗಳು ಇತರ ಪ್ರದೇಶಗಳಿಗಿಂತ ವಿಶೇಷವಾಗಿ ಗೋಚರಿಸುತ್ತವೆ. ಬಹುಶಃ ಇದಕ್ಕೆ ನಮ್ಮಲ್ಲಿ ರೂಢಿಯಿರುವ ಆಹಾರವೂ ಕಾರಣವಿರಬೇಕು. ಜೀವಸತ್ವ ಗಳು, ಸಸಾರಜನಕ ಪದಾರ್ಥಗಳ ಕೊರತೆಯಿಂದ ಕೂಡಿದ ಆಹಾರ ಸೇವನೆ ಇದರ ಉದಯಕ್ಕೆ ನಾಂದಿ ಹಾಕುವುದು. ನಾವು ಊಟ ಮಾಡುವ ಅನ್ನ, ಸಾರು, ಖಾರದ ಚಟ್ನಿ, ಹೆಚ್ಚು ಪೌಷ್ಟಿಕ ಆಹಾರದ ಅಂಶಗಳನ್ನು ಹೊಂದಿರುವದಿಲ್ಲ.

ತೀರ ವಯಸ್ಸಾದವರಲ್ಲಿ ಗಟ್ಟಿನಾಳ ಕ್ರಿಯೆ (athero-sclerosis) ಯ ಫಲವಾಗಿ ಉಂಟಾಗಬಹುದಾದ ರಕ್ತನಾಳ ಸ್ನಾಯುವಿನ ಸಂಕುಚನ ಅಥವಾ ಅದರಲ್ಲಿ ರಕ್ತಕರಣಿ (thrombosis) ಯ ಫಲವಾಗಿ ರಕ್ತ ಪೂರೈಕೆಗೆ ವ್ಯತ್ಯಯ ಉಂಟಾಗಿ ಅದರ ಭದ್ರತೆಯು ಕುಗ್ಗಬಹುದು. ಕರುಳು ಹುಣ್ಣುಗಳು ಅಷ್ಟಾಗಿ ಹೆಂಗಸರಲ್ಲಿ ಕಂಡು ಬಾರವು. ಅವರಲ್ಲಿರುವ ವಿಶಿಷ್ಟ ರಸದೂತಗಳು ಈ ರೋಗದ ವಿರುದ್ಧ ಹೆಚ್ಚು ರಕ್ಷಣೆಯನ್ನೊದಗಿಸುತ್ತಿರಲಿಕ್ಕೆ ಸಾಕು.

ಜಠರ ಮತ್ತು ಕರುಳಿಗೆ ಸಂಬಂಧಪಿಲ್ಲದ ಇತರ ದೈಹಿಕ ಗುಣ ವಿಶೇಷಗಳು ಸಹ ಹುಣ್ಣು ಆಗುವುದರಲ್ಲಿ ಪಾತ್ರವಹಿಸ ಬಲ್ಲವು. ವಂಶ ಪರಂಪರೆಯಾಗಿ ಹುಣ್ಣುಗಳ ಆಗುವಿಕೆ ಯನ್ನು ಅನೇಕರಲ್ಲಿ ನೋಡುತ್ತೇವೆ. ತಮ್ಮ ಹಿರಿಯರಲ್ಲಿ ಹೊಟ್ಟೆಯ ಹುಣ್ಣುಗಳು ಇದ್ದಲ್ಲಿ ಅನೇಕ ಬಾರಿ ಅವರಿನ್ನೂ ಯೌವನಾವಸ್ಥೆಯನ್ನು ದಾಟುತ್ತಿರುವುದರೊಳಗೆ ಹುಣ್ಣುಗಳು ಗೋಚರವಾಗುವ ಸಂಭವ ವಿಪುಲವಾಗಿದೆ. ದೇಶಾದ್ಯಂತ ಇರುವ ಜನರ ದೇಹದಲ್ಲಿನ ರಕ್ತವನ್ನು ಮುಖ್ಯವಾಗಿ ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಬಹುದು. ಅವುಗಳಲ್ಲಿ ಮುಖ್ಯ ವಾಗಿ 'ಓ' ಗುಂಪನ್ನು ಹೊಂದಿದವರಲ್ಲಿ ಹೊಟ್ಟೆಯ ಹುಣ್ಣು ಗಳು ವಿಶೇಷವಾಗಿ ಗೋಚರಿಸುತ್ತವೆ. ಅಲ್ಲದೆ ಚಳಿಯಿಂದ ಕೂಡಿದ ಹವಾಮಾನದ ಬದಲಾವಣೆಗಳು ಸಹ ಹುಣ್ಣಿನ ಆಗಮನಕ್ಕೆ ಕಾರಣವಾಗಬಲ್ಲವು.

ಇವುಗಳ ಫಲವಾಗಿ ಹಾಗೂ ಇತರ ಅಗೋಚರ ಕಾರಣ ಗಳಿಂದಾಗಿ ಉಂಟಾಗುವ ಲೋಳ್ಪರೆಯ ನಿರ್ಜೀವತ್ವ ಇಲ್ಲವೆ ಅದರ ಸವಕಳಿಯಾದ ಲೋಳ್ಪರೆಯ ಪ್ರದೇಶವನ್ನು ಜಠರಾಗ್ನಿ ದಹಿಸಿ ಅಲ್ಲಿ ಹುಣ್ಣನ್ನು ಉಂಟುಮಾಡುತ್ತದೆ. ಹಾಳಾದ ಲೋಳ್ಪರೆಯ ಕೆಳಗೆ ಅಡಕವಾಗಿರುವ ಜಠರಕೋಶ ಅಥವಾ ಕರುಳಿನ ಪ್ರದೇಶಗಳು ಜೀರ್ಣಕದ ಪ್ರಭಾವಕ್ಕೆ ಒಳಗಾಗುತ್ತವೆ. ಅಲ್ಲಿ ಅದರ ಪ್ರಭಾವವನ್ನು ನಿರೋಧಿಸುವ ಶಕ್ತಿ ಇರುವುದಿಲ್ಲ.

ಲೋಳ್ಪರೆಯಲ್ಲಿ ಹುಣ್ಣಿನ ನಿರೋಧಕ ಶಕ್ತಿಯು ಇಳುವರಿಗೆ ಇನ್ನಿತರ ಕಾರಣಗಳಿರಬಹುದು. ಜಠರರಸದ ಪ್ರಭಾವದಿಂದ

ಅದು ಹಾಳುಗೊಂಡು ಹುಣ್ಣಾಗಬಲ್ಲುದಾದುದರಿಂದ ಆಮ್ಲದ ಹೆಚ್ಚುವರಿ ಹುಣ್ಣಿಗೆ ಒಂದು ಪ್ರಮುಖ ಕಾರಣವಾಗಿದೆ. ಹುಣ್ಣಿನ ಉದ್ಭವಕ್ಕೆ ಹಾಗೂ ಅದರ ಉಳಿವಿಕೆಗೆ ಅದು ಮುಖ್ಯವಾದ ಕಾರಣ.

ಮೇದೋಜೀರಕ ಗ್ರಂಥಿಯ ದ್ವೀಪಸಂಕಲ್ಪ (Islets) ದಲ್ಲಿನ ಜೀವಕಣಗಳ ವಿಪುಲ ಬೆಳವಣಿಗೆಯ ಫಲವಾಗಿ ಉತ್ಪತ್ತಿಯಾಗುವ ರಸದೂತ ಜಠರದಲ್ಲಿ ಹೆಚ್ಚುವರಿ ಆಮ್ಲದ ಉತ್ಪಾದನೆಗೆ ಕಾರಣವಾಗಿ ತನ್ಮೂಲಕ ಹುಣ್ಣನ್ನು ಉಂಟುಮಾಡಬಲ್ಲುದು. ದೈಹಿಕ ಹಾಗೂ ಮಾನಸಿಕ ಒತ್ತಡಗಳ ಪ್ರತಿಕ್ರಿಯೆಯಾಗಿ ಹುಣ್ಣುಗಳು ಗೋಚರಿಸುವುದು ಸಿದ್ಧವಾಗಿದೆ. ಮೂತ್ರಜನಕಾಂಗದ ಮೇಲಿರುವ ಗ್ರಂಥಿ (suprarenal gland) ಯಿಂದ ಉತ್ಪತ್ತಿಯಾಗಿ ರಕ್ತದಲ್ಲಿ ಪ್ರವಹಿಸುವ ರಸದೂತ–ಕಾರ್ಟಿಸೋನ್ ಜಠರದ ಆಮ್ಲಕಣಗಳ ಮೇಲೆ ಉತ್ತೇಜನಕಾರಿಯಾಗಿ ಕೆಲಸ ಮಾಡಿ ಹೆಚ್ಚು ರಸೋತ್ಪಾದನೆಯನ್ನು ಮಾಡಬಲ್ಲುದು.

ಹುಣ್ಣಿನ ಬೆಳವಣಿಗೆಗೆ ಕಾರಣೀಭೂತವಾದ ಅನೇಕ ಅಂಶಗಳಿದ್ದರೂ ಅವುಗಳೆಲ್ಲ ಒಂದೇ ವಿಧವಾಗಿ ಅದರ ಬೆಳವಣಿಗೆಗೆ ಸಹಕಾರಿಯಾಗುತ್ತವೆ. ಹೊಟ್ಟೆಯ ಹುಣ್ಣುಗಳು ಆಗುವ ಸ್ಥಳ ಈ ಜೀರ್ಣಾಂಗಗಳ ಲೋಳ್ಪರೆಯ ನೂರನೇ ಒಂದು ಭಾಗದಲ್ಲಿ ತನ್ನದೇ ಆದ ನಿರ್ದಿಷ್ಟ ಸ್ಥಳಗಳಲ್ಲಿ ಜಠರಾಗ್ನಿಯ ಪ್ರಭಾವದಿಂದ ಅರಕ್ಷಿತವಾದ ಲೋಳ್ಪರೆಯ ಮೇಲೆ ಗೋಚರಿಸುತ್ತವೆ. ಒಮ್ಮೆ

ತೋರಿಬಂದ ಹುಣ್ಣು ಮಾಯುತ್ತ ಮತ್ತೆ ಮರುಕಳಿಸುತ್ತ ನಿರಂತರವಾಗಿ ಉಳಿಯಬಲ್ಲುದು.

ಈಚೆಗೆ ತೋರಿಬಂದ ಹುಣ್ಣುಗಳು ಜಠರದ ಯಾವುದೇ ಪ್ರದೇಶದಲ್ಲಿರಬಹುದು. ಅವುಗಳ ಸಂಖ್ಯೆ ಬಹಳ. ವಿಷದ (toxin) ಪ್ರಭಾವದಿಂದ ಸವೆದುಹೋದ ಲೋಳ್ಪರೆಯ ಮೇಲೆ ಆಳವಾಗಿ ಇಳಿಯದೆ ತೋರಿಬಂದು, ಅವು ಬೇಗನೆ ಮಾಯ್ದು ಹೋಗುತ್ತವೆ. ಏಕಾಏಕಿಯಾಗಿ ಅಪಚನ, ಆಹಾರದ ಮೇಲೆ ಇಷ್ಟವಿಲ್ಲದಿರುವಿಕೆಯ ಮೂಲಕ ತೋರಿಬರುತ್ತವೆ. ದೀರ್ಘ ಕಾಲೀನ (chronic) ಹುಣ್ಣುಗಳು ಜಠರದ ವಿಸ್ತರಣದಂತಿರುವ ವಕ್ರಗರುಳಿನ ಪ್ರಥಮ ಒಂದು ಇಂಚಿನಷ್ಟು ಪ್ರದೇಶದಲ್ಲಿ, ಜಠರದಲ್ಲಿ ಅದು ಜಠರನಾಳದಂತೆ ಕಿರಿದಾಗಿ ಬಾಗುವ ಪ್ರದೇಶದಿಂದ ಎರಡರಿಂದ ನಾಲ್ಕು ಇಂಚುಗಳಷ್ಟು ಮೇಲೆ ಅದರ ಬಾಗಿದ ಕಿರಿಯ ಮಡಿಕೆ (lesser curvature) ನಲ್ಲಿ ತೋರಿಬರುತ್ತವೆ. ಆ ಪ್ರದೇಶವು ಆಹಾರ ಹೋಗುವ ಹೆದ್ದಾರಿ. ಕರುಳಿನ ಮುಂಭಾಗದಲ್ಲಿ, ಜಠರದ ಹಿಂಭಾಗದಲ್ಲಿ ಅವುಗಳ ಇರುವಿಕೆ ಸಾಮಾನ್ಯ.

ದುಂಡಗೆ, ಲಾಳಿಕೆಯ ರೂಪದಲ್ಲಿ ಇರುವ ಹುಣ್ಣು ಲೋಳ್ಪರೆಯ ಒಳಕ್ಕೆ ಒಂದು ಇಂಚಿನಷ್ಟು ಆಳವಾಗಿ ಇಳಿದು ಸ್ನಾಯುವನ್ನು ತಳವಾಗಿ ಹೊಂದಿರುತ್ತವೆ. ಸುತ್ತಲಿನ ಪ್ರದೇಶಕ್ಕಿಂತ ಅಂಚು ಎತ್ತರದಲ್ಲಿದ್ದು ಅದರ ಒಳಮಗ್ಗುಲಿನಲ್ಲಿ ಇಳಿ

ಮುಖವಾಗಿ ತಳವನ್ನು ಸೇರುತ್ತದೆ. ತಳವು ದಪ್ಪನಾಗಿರುತ್ತದೆ. ಹೊರಗಡೆಯಿಂದ ಈ ಪ್ರದೇಶವನ್ನು ನೋಡಿದರೆ ಅದು ಬೆಳ್ಳಗೆ ಗಟ್ಟಿಯಾಗಿ ತೋರಿಬರುತ್ತದೆ. ಹುಣ್ಣು ಮಾಯ್ದು ಹೋದ ಮೇಲೆ ಅಲ್ಲಿನ ಪ್ರದೇಶ ಮುರುಟಿ ಹೋಗುತ್ತದೆ.

ಹುಣ್ಣಿನ ತಳಭಾಗದಲ್ಲಿ ದಪ್ಪವಾಗಿ ಮುರುಟಿಹೋದ ಕಲೆ (scar), ಮಾಯುತ್ತಿರುವ ಜೀವಂತ ವಿಭಾಗ, ನಿರ್ಜೀವ ಜೀವಕಣಗಳ ಸಾಲು ಹಾಗೂ ಬಿಳಿ ರಕ್ತಕಣಗಳು ಮತ್ತು ಎಳೆಗಳಿಂದ ತುಂಬಿದ ಉರಿಯ (inflammation) ವಿಭಾಗವೆಂದು ಹುಣ್ಣನ್ನು ವಿಂಗಡಿಸಬಹುದು. ತಳದಲ್ಲಿರುವ ಮುರುಟಿಹೋದ ಪ್ರದೇಶ ಬೆಳೆಯುತ್ತಿರುವ ಲೋಳ್ಪರೆಯ ಅಂಚುಗಳು ತೀವ್ರ ಸಂಬಂಧ ಹೊಂದದಂತೆ ಮಾಡುತ್ತದೆ. ನಿರ್ಜೀವತ್ವ ಹೊಂದಿದ ಕಣಗಳ ಸಾಲು ಹೊಸ ಜೀವಂತ ಕಣಗಳ ಬೆಳವಣಿಗೆಗೆ ಅಡ್ಡಿಯಾಗಿ ಆ ಪ್ರದೇಶ ಮುಚ್ಚದಂತಾಗಿಸುತ್ತದೆ. ಸುತ್ತಲಿನ ಸ್ನಾಯುವಿನ ಪ್ರದೇಶ ನಾಶಹೊಂದಿರುವುದರಿಂದ ಅದು ಮಾಯ್ದು ಗುಣಹೊಂದಲು ಬಹುದಿನಗಳು ಬೇಕು. ಅಲ್ಲದೆ ಆ ರೀತಿಯಾಗಿ ಮಾಯ್ದ ಪ್ರದೇಶ ಭದ್ರಗೊಳ್ಳದೆ ಬಿಚ್ಚಿಕೊಳ್ಳುವ ಸಂಭವವಿದೆ. ಆದುದರಿಂದ ಹುಣ್ಣು ತೀರ ಆಳವಾಗಿ ಬೆಳೆಯುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ತೋರಿಬರುವ ಆಮ್ಲ ಗುಣ ಹೊಂದುವಿಕೆಗೆ ಅಡ್ಡಿಯಾಗುತ್ತದೆ.

೩. ಗುಣಲಕ್ಷಣಗಳು

ಜಠರ ಮತ್ತು ಕರುಳು ಹುಣ್ಣುಗಳು ಬೇರೆ ಬೇರೆ ಪ್ರದೇಶದಲ್ಲಿ ಆಗುವ ವ್ರಣಗಳಾದರೂ, ಅವುಗಳ ಗುಣ ಲಕ್ಷಣಗಳು ಸ್ಥೂಲವಾಗಿ ಒಂದೇ ಇದ್ದು ಕೆಲವೊಂದು ಪ್ರಮುಖ ಬದಲಾವಣೆಗಳನ್ನು ಹೊಂದಿವೆ. ನೋವು ಈ ರೋಗದ ಬಹುಮುಖ್ಯ ಲಕ್ಷಣ. ಹುಣ್ಣಿನ ಸುತ್ತ ಇರುವ ಪ್ರದೇಶದಲ್ಲಿ ತೋರಿಬರುವ ಉರಿ, ಜಠರದಲ್ಲಿ ಅಧಿಕ ಪ್ರಮಾಣದಲ್ಲಿ ಉತ್ಪಾದನೆಗೊಳ್ಳುವ ಆಮ್ಲ, ಜಠರ ಮತ್ತು ಕರುಳ ಕೋಶದ ಸ್ನಾಯುವಿನ ಸಂಕುಚನ ಕ್ರಿಯೆ ಮತ್ತು ಅದರೊಳಗಿನ ಒತ್ತರದ ಬದಲಾವಣೆಗಳು ನೋವನ್ನು ಪ್ರಚೋದನೆಗೊಳಿಸುತ್ತವೆ. ಅಲ್ಲದೆ ಅದನ್ನು ಹೊಂದಿದ ಮನುಷ್ಯನ ಸ್ವಭಾವವೂ (temperament) ಸಹ ಅದರ ಅನುಭವದಲ್ಲಿ ಪರಿಣಾಮ ಬೀರಬಲ್ಲದು.

ಈ ರೀತಿಯ ನೋವು ಕಾಲಕಾಲಕ್ಕೆ ಬರುತ್ತಲೇ ಇರುವುದು. ಹುಣ್ಣು ತಂತಾನೆ ಮಾಯವಾಗಿ ಆರು ತಿಂಗಳಿ

ನಿಂದ ವರುಷದ ವರೆಗೂ ಬರದಂತೆ ಇರಬಲ್ಲುದು. ರೋಗವು ಬಲಿತಂತೆ ಒಮ್ಮೊಮ್ಮೆ ಬಂದಾಗಲೂ ನೋವಿನ ಅವಧಿಯು ದೀರ್ಘವಾಗುತ್ತ ಹೋಗುತ್ತದೆ. ನೋವಿನಿಂದ ವಿರಾಮದ ಅವಧಿಯು ಕಡಿಮೆಯಾಗುತ್ತದೆ. ಕೊನೆಗೆ ಉಂಟಾಗುವ ರೋಗದ ತೊಡಕುಗಳ ಫಲವಾಗಿ ನೋವು ಸದಾ ಕಾಲವೂ ಇರುತ್ತದೆ. ಕರುಳಿನ ಹುಣ್ಣುಗಳಲ್ಲಿ ದುಡಿತದ ಶ್ರಮ, ಆಯಾಸ, ಭೀತಿ, ಹೊಟ್ಟೆಕಿಚ್ಚು, ಕುತೂಹಲ, ಆಶಾಭಂಗ, ಪ್ರಯತ್ನ ಭಂಗ ಮತ್ತು ಹವಾಮಾನದ ಬದಲಾವಣೆಗಳ ಫಲವಾಗಿ ಹುಣ್ಣಿನ ನೋವು ಪದೇ ಪದೇ ಬರುತ್ತದೆ.

ರೋಗದ ಇತಿಹಾಸವನ್ನು ಪರಿಶೀಲಿಸಿದರೆ ಕಾಲಾನುಸಾರವಾಗಿ ಬರುವ ಚಿರಕಾಲದ ಹುಣ್ಣುಗಳು ೧೦ ರಿಂದ ೨೦ ವರುಷಗಳ ಪರ್ಯಂತ ವ್ರಣದ ಚಿನ್ಹೆಗಳನ್ನು ತೋರುತ್ತ ಆಗಾಗ್ಗೆ ಹೆಚ್ಚುತ್ತ, ಮಾಯುತ್ತ ಬೆಳವಣಿಗೆ ಹೊಂದುತ್ತಿರುವ ಸಂಗತಿ ಗೋಚರಿಸುತ್ತದೆ.

ಜಠರದ ಹುಣ್ಣು : ಇಲ್ಲಿ ನೋವು ಹೊಕ್ಕುಳಿನ ಮೇಲ್ಭಾಗದ ಹೊಟ್ಟೆಯ ಪ್ರದೇಶದ ಎಡಭಾಗದಲ್ಲಿ ಊಟ ಮಾಡಿದ ಅರ್ಧ ಘಂಟೆಯಿಂದ ಎರಡು ಘಂಟೆಗಳ ಅವಧಿಯಲ್ಲಿ ತೋರಿಬರುತ್ತದೆ. ಜಠರಕೋಶ ತೆರವಾಗುತ್ತ ಹೋದಂತೆ ನೋವಿನ ತೀವ್ರತೆ ಕಡಿಮೆಯಾಗುತ್ತ ಹೋಗುತ್ತದೆ. ಆಹಾರ ಸೇವನೆ–ನೋವು–ಸಮಾಧಾನ–ಈ ಪರಿ ಗಡಿಯಾರದ ಕ್ರಮ

ಬದ್ಧತೆಯ ರೂಪದಲ್ಲಿ ಇದರ ಗುಣಲಕ್ಷಣಗಳು ತೋರಿ ಬರುವುದು. ಉರಿದಂತೆ. ಕಡಿದಂತೆ, ಸೇದಿದಂತೆ ಇಲ್ಲವೆ ಗೆಬರಿದ ಹಾಗೆ ಕಂಡುಬರುವ ನೋವು ಒಂದೇ ವಿಧವಾಗಿರುತ್ತ, ಬಂದ ಪ್ರತಿಯೊಂದು ಸಲ ಹದಿನೈದು ನಿಮಿಷಗಳಿಂದ ಕೆಲಘಂಟೆಗಳ ವರೆಗೂ ಇರುವುದು. ನೋವು ಬೆನ್ನಿನತ್ತ ಪಸರಿಸಿ ಹೋಗಬಹುದು. ಅನೇಕ ಸಲ ವಾಂತಿಯಿಂದ ಹೊಟ್ಟೆ ತೆರವಾಗಿ ನೋವು ಕಡಿಮೆಯಾಗುವುದು. ಇದನ್ನು ಅರಿವ ರೋಗಿ ಅನೇಕ ಬಾರಿ ತಾನೇ ವಾಂತಿ ಮಾಡಿಕೊಂಡು ಸಮಾಧಾನ ಪಡೆಯಬಲ್ಲ. ಆಹಾರವು ಜಠರ ರಸದೊಡಗೂಡಿ ಹೊರಬರುತ್ತದೆ. ಸೋಡಾ, ಹಾಲು, ನೀರು ಇಲ್ಲವೆ ಸೋಡಾ ಬೈಕಾರ್ಬನ್ನೊಳಗೊಂಡ ಕ್ಷಾರ ಪದಾರ್ಥಗಳ ಸೇವನೆಯಿಂದಲೂ ನೋವಿನ ತೀವ್ರತೆ ಕಡಿಮೆಯಾಗುತ್ತದೆ. ಮಲಗಿದ ಮೇಲೆ ಮೇಲು ಹೊಟ್ಟೆಗೆ ಶಾಖವನ್ನು ಕೊಟ್ಟ ಮೇಲೂ ಸಮಾಧಾನ ವಾಗುತ್ತದೆ. ಆಗಾಗ್ಗೆ ರಕ್ತಕಾರಿಕೆಯಾಗಬಹುದು. ಈ ಹುಣ್ಣು ಕ್ಯಾನ್ಸರ್‌ನಂತೆ ಬೆಳೆಯಬಲ್ಲುದು.

ಆಹಾರ ಸೇವನೆ ನೋವನ್ನು ಹೆಚ್ಚಿಸುವುದರಿಂದ ರೋಗಿಗೆ ಆಹಾರದ ಮೇಲೆ ರುಚಿಯಿದ್ದರೂ, ಊಟಮಾಡಲು ಹಿಂಜರಿಯುತ್ತಾನೆ. ಅದರಿಂದಾಗಿ ರೋಗಿ ಆಹಾರ ನ್ಯೂನತೆ ಯಿಂದ (illnourishment) ಬಳಲಿ, ತೂಕ ಕಡಿಮೆಯಾಗಿ ದೇಹ ಒಣಗುತ್ತದೆ. ಮಲಬದ್ಧತೆ ಸಾಮಾನ್ಯ. ನೋವಿದ್ದ ಕಾಲದಲ್ಲಿ ಹೊಟ್ಟೆಯ ಮೇಲ್ಭಾಗವನ್ನು ಮುಟ್ಟಿದರೆ ವೇದನೆ

ಯನ್ನು ತೋರಿಸಬಹುದಲ್ಲದೆ,ಆ ಪ್ರದೇಶದಲ್ಲಿ ಸ್ನಾಯು ಸೆಟೆದು ನಿಂತಿರಲೂಬಹುದು.

ಜಠರದ ಹುಣ್ಣುಗಳು ೩೦ ರಿಂದ ೬೦ ವರುಷದ ಮಧ್ಯ ವಯಸ್ಸಿನವರಲ್ಲಿ ಹೆಚ್ಚಾಗಿ ತೋರಿ ಬರುತ್ತವೆ. ಹೆಂಗಸರಲ್ಲಿಯೂ ತೋರಿ ಬರಬಹುದಾದರೂ ಗಂಡಸರಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ನ್ಯೂನ ಆಹಾರ ಸೇವನೆ, ಆಹಾರವನ್ನು ಚೆನ್ನಾಗಿ ಅಗಿಯದಿರುವಿಕೆ ಇದರ ಬೆಳವಣಿಗೆಗೆ ಸಹಕಾರಿಯಾಗಬಲ್ಲುದು. ಕೆಳವರ್ಗದ ಜನರಲ್ಲಿ, ದುಡಿಮೆಗಾರರಲ್ಲಿ, ರೈತರಲ್ಲಿ ಹೆಚ್ಚಾಗಿ ಕಾಣಿಸುವುದು.

ಜಠರದ ಹುಣ್ಣುಗಳ ಗುಣಲಕ್ಷಣಗಳ ಬೆಳವಣಿಗೆ ನಿಧಾನ. ರೋಗದ ಪ್ರಾರಂಭದಲ್ಲಿ ಭಾರಿ ಭೋಜನವಾದ ಮೇಲೆ, ಸರಿಯಾಗಿ ಪಚನಗೊಳ್ಳದ ಆಹಾರ ಸೇವನೆಯ ಅನಂತರ ಉರಿದಂತೆ ನೋವು ತೋರಿಬರಬಹುದು. ಆ ನೋವು ಎದೆಯತ್ತ ಇಲ್ಲವೆ ಬೆನ್ನಿನತ್ತ ಹರಿದು ಹೋಗಬಹುದು.

ಕರುಳು ಹುಣ್ಣು : ಕರುಳು ಹುಣ್ಣುಗಳು ಯುವಕರಲ್ಲಿ ಮತ್ತು ಮಧ್ಯವಯಸ್ಕರಲ್ಲಿ ತೋರಿಬರುತ್ತವೆ. ಈ ಹುಣ್ಣು ಹೆಚ್ಚಾಗಿ ಗಂಡಸರಲ್ಲೇ ಉದ್ಭವವಾಗುತ್ತದೆ. ತೀರ ಅವಸರದ ಪ್ರಕೃತಿಯುವರಲ್ಲಿ, ಕೆಲಸದ ಹೊರೆಯಿಂದ ಊಟವನ್ನು ತೀರ ಅವಸರದಿಂದ ಮಾಡುವವರು ಅಥವಾ ಸಮಯಕ್ಕೆ ಸರಿಯಾಗಿ ಊಟಮಾಡದವರಲ್ಲಿ ಇದು ಜಾಸ್ತಿ. ಊಟದ ನಡುವೆ ಕಾಗದ

ಪತ್ರಗಳ ಪರಿಶೀಲನೆ, ಟೆಲಿಫೋನಿನಲ್ಲಿಮಾತುಕತೆ, ಇತ್ತಲಿಂದತ್ತ ಓಡಾಟ, ಧೂಮಪಾನ ಇದಕ್ಕೆ ಸಹಾಯಕ ಅಂಶಗಳಾಗುತ್ತವೆ. ಈ ರೋಗ ಸಮಾಜದ ಮೇಲ್ವರ್ಗದ ಜನಗಳಲ್ಲಿ ಸಾಮಾನ್ಯ. ಮಹತ್ವಾಕಾಂಕ್ಷೆಯುಳ್ಳ ಉದ್ಯೋಗಿಗಳಲ್ಲಿ ಹೆಚ್ಚು. ಈ ತೆರನಾದ ಹುಣ್ಣುಗಳು ದಿನೇ ದಿನೇ ಹೆಚ್ಚಾಗುತ್ತಲಿವೆ.

ಪ್ರಾರಂಭದಲ್ಲಿ ಹೊಟ್ಟೆಯಲ್ಲಿ ಏನೋ ಕಸಿವಿಸಿಯಾದಂತೆ ನೋವು ತೋರಿಬರುತ್ತದೆ; ಇಲ್ಲವೆ ಹಸಿವಿನ ಬಾಧೆಯಂತೆ ಕಂಡುಬರುವುದು. ಈ ರೋಗದಲ್ಲಿ ನೋವು ಊಟ ಆದ ಎರಡರಿಂದ ನಾಲ್ಕು ಘಂಟೆಗಳ ತರುವಾಯ ತೋರಿಬಂದು ಹಸಿವಿನ ಬಾಧೆಯ ರೂಪದಲ್ಲಿ ಕಾಣಿಸುತ್ತದೆ. ಹೊಟ್ಟೆಯು ತೆರವಾದ ಸಮಯದಲ್ಲಿ ನೋವು ತೋರಿಬರುವುದರಿಂದ ಈ ರೋಗದ ಗುಣಲಕ್ಷಣಗಳು ಆಹಾರ–ಸಮಾಧಾನ–ನೋವು : ಈ ಪ್ರಕಾರ ಕಾಣಿಸಿಕೊಳ್ಳುತ್ತವೆ. ನೋವು ಕಾಣಿಸಿದಾಗ ಆಹಾರ, ಕ್ಷಾರ ಪದಾರ್ಥಗಳು, ಹಾಲು, ಕೊನೆಗೆ ನೀರು ಸೇವಿಸಿದರೂ ಸಮಾಧಾನ ಪಡೆಯಬಹುದು. ಅವುಗಳ ಫಲ ವಾಗಿ ಆಮ್ಲದ ಪ್ರಮಾಣ ಇಳುವರಿಗೊಂಡು ಹೊಟ್ಟೆಯ ಕಸಿವಿಸಿ ಕಡಿಮೆಯಾಗುವುದು. ಈ ನೋವು ಪ್ರಾರಂಭದಲ್ಲಿ ಸಂಜೆ, ರಾತ್ರಿಯ ವೇಳೆಯಲ್ಲಿ ಇಲ್ಲವೆ ಬೆಳಗು ಮುಂಜಾನೆ ತೋರಿಬರುತ್ತದೆ. ಮಲಗಿದ ವ್ಯಕ್ತಿ ನೋವಿನ ಬಾಧೆಯಿಂದ ಎದ್ದು ಕುಳಿತುಕೊಳ್ಳುತ್ತಾನೆ. ರಾತ್ರಿ ಬೇಗ ಊಟಮಾಡಿ ಮಲಗಿದಾಗ, ಮಲಗಿದ ಕೆಲ ಘಂಟೆಗಳಲ್ಲಿಯೇ ನೋವು ತೋರಿಬರಬಲ್ಲುದು. ಈ ರೋಗಿಗಳು ಆಹಾರವನ್ನು ತೆಗೆದು

ಕೊಳ್ಳುವುದರಿಂದ ನೋವು ಶಮನ ಹೊಂದುವುದನ್ನು ಗುರುತಿಸಿ ಕೊಳ್ಳುವುದರಿಂದ ಆಗಾಗ್ಗೆ ಆಹಾರವನ್ನು ತಿನ್ನುತ್ತಲೇ ಇರುವರು. ತುಂಬಿದ ಹೊಟ್ಟೆಯಿಂದಲೇ ಸಮಾಧಾನ ದೊರೆಯುತ್ತದೆ. ಆದುದರಿಂದಲೇ ದೈಹಿಕ ಬಲ ಚೆನ್ನಾಗಿದ್ದು ರೋಗಿ ಬಲಶಾಲಿಯಾಗಿರುತ್ತಾನೆ.

ನೋವು ಹೊಕ್ಕಳಿನ ಮೇಲಿನ ಹೊಟ್ಟೆಯ ಬಲ ಭಾಗದಲ್ಲಿ ತೋರಿಬರುವುದು. ಆ ಪ್ರದೇಶದಿಂದ ನೋವು ಬೆನ್ನಿನ ಕಡೆ ಹರಿದು ಹೋಗಬಲ್ಲುದು. ಆ ಪ್ರದೇಶವನ್ನು ಮುಟ್ಟಿದರೆ ವೇದನೆಯಾಗುವುದು. ವಾಂತಿ ಸಾಮಾನ್ಯವಾಗಿ ತೋರಿಬರುವುದಿಲ್ಲ, ಅಲ್ಲದೆ ರಕ್ತ ಕಾರಿಕೆಯು ಜಠರ ಹುಣ್ಣಿನಂತೆ ಗೋಚರಿಸುವುದಿಲ್ಲ. ಹುಣ್ಣಿನಿಂದ ಸೋರುವ ರಕ್ತ ಅಗೋಚರವಾಗಿ ವಿಸರ್ಜಿಸಲ್ಪಟ್ಟರೂ, ರಕ್ತೋದ್ರೇಕ (haemorrhage) ವಾದಾಗ ಟಾರ್‌ನಂತೆ ಕಪ್ಪಾಗಿ ಮಲದೊಡನೆ ಮಿಶ್ರಗೊಂಡು ವಿಸರ್ಜಿಸಲ್ಪಡುವುದು. ಮಲಬದ್ಧತೆ ಸಾಮಾನ್ಯ. ಈ ಹುಣ್ಣು ಕ್ಯಾನ್ಸರ್‌ನಂತೆ ಯಾವಾಗಲೂ ಬೆಳವಣಿಗೆ ಹೊಂದುವುದಿಲ್ಲ.

೪. ತೊಡಕುಗಳು

ಹುಣ್ಣು ತೀರ ಆಳವಾಗಿ ಬೆಳೆದಾಗ ಅಲ್ಲಿ ತೂತು ಬಿದ್ದು (perforation) ಜಠರ ಮತ್ತು ಕರುಳಿನ ಪದಾರ್ಥಗಳು ಹೊರ ಬಂದು ಕರುಳಪೊರೆಯ ಚೀಲದ ಉರಿ (peritonitis) ಯನ್ನುಂಟು ಮಾಡಬಹುದು. ತೀವ್ರತೆರನಾದ ನೋವು ಕಾಣಿಸಿ ಅದು ಬಲಭುಜದಲ್ಲೂ ತೋರಿ ಬರಬಹುದು. ದೇಹ ಬಿಳಿಚಿ ಕೊಂಡು ಬೆವರುತ್ತದೆ; ಉಸಿರಾಟದ ಗತಿ ತೀವ್ರವಾಗುತ್ತದೆ. ಹಸಿರು ವರ್ಣದ ವಾಂತಿ ತೀವ್ರತೆರನಾಗಿ ಕಾಣಿಸುತ್ತದೆ. ಹೊಟ್ಟೆ ತನ್ನ ಚಲನ ಶಕ್ತಿಯನ್ನು ಕಳೆದುಕೊಂಡು ಬಿರುಸಾಗುತ್ತದೆ. ಕರುಳಿನ ಚಲನ ಶಬ್ದ ಕೇಳಿಬಾರದು; ಯಕೃತ್ (liver) ನ ಪ್ರತಿನಾದ (resonance) ಮಾಯವಾಗುತ್ತದೆ.

ಹುಣ್ಣಿನ ಪ್ರದೇಶದಲ್ಲಿನ ರಕ್ತನಾಳಗಳು ಒಡೆದು ರಕ್ತೋ ದ್ರೇಕವಾಗಿ ವಾಂತಿಯಲ್ಲಿ ರಕ್ತ ತೋರಿ ಬರಬಹುದು (haematemesis). ಕಪ್ಪಾಗಿ ಕಾಫಿಯಂತೆ, ಉಂಡೆಗಟ್ಟಿದ ರಕ್ತ ಆಹಾರದ ಅಂಶಗಳೊಡನೆ ಕಂಡುಬರುತ್ತದೆ. ಅಲ್ಲದೆ ಮಲ

ವಿಸರ್ಜನೆ ಟಾರ್‌ನಂತೆ ಕಪ್ಪಾಗಿ ಹೋಗುವುದು. ಇದರ ಪರಿಣಾಮವಾಗಿ ದೇಹ ತಲ್ಲಣಿಸಿ (shock) ರಕ್ತಪರಿಚಲನೆಯು ಕುಸಿಯುವಿಕೆ ಗೋಚರಿಸಿ, ದೇಹ ಬಿಳಿಚಿಕೊಳ್ಳುವುದು. ಚರ್ಮ ತಣ್ಣಗಾಗುವುದು. ನಾಡಿ ಬಡಿತ ವೇಗ ಗತಿಯನ್ನು ಹೊಂದುವುದು. ರಕ್ತದ ಒತ್ತಡ ಇಳುವರಿಯಾಗಿ ಹೊಟ್ಟೆಯಲ್ಲಿ ಕಸಿವಿಸಿ, ಒದ್ದಾಟ ತೋರಿಬರುವುದು. ಹುಣ್ಣಿನ ಪ್ರದೇಶದಲ್ಲಿನ ಚಿಕ್ಕ ರಕ್ತನಾಳ ಒಡೆಯುವುದು ಸಾಮಾನ್ಯವಾದರೂ, ವಯಸ್ಸಾದವರಲ್ಲಿ ಹುಣ್ಣಿನ ತಳಭಾಗದಲ್ಲಿ ಗಟ್ಟಿನಾಳ ಕ್ರಿಯೆಯಿಂದ ಸವಕಳಿ ಹೊಂದಿದ ದೊಡ್ಡ ರಕ್ತನಾಳಗಳು ಬಿಚ್ಚಿಕೊಳ್ಳಬಹುದು. ಅನೇಕ ಬಾರಿ ಹೊಟ್ಟೆಯ ಉರಿಯನ್ನು ಉಂಟುಮಾಡಬಲ್ಲ ಆಸ್ಪಿರಿನ್, ಕಾರ್ಟಿಸೋನ್, ಫಿನೈಲ್ ಬ್ಯುಟಾಸೋನ್ ಗುಳಿಗೆಗಳ ಸೇವನೆ ರಕ್ತಸ್ರಾವಕ್ಕೆ ಕಾರಣವಾಗಬಲ್ಲುದು.

ಆಗಾಗ್ಗೆ ಹುಣ್ಣಿನ ಸುತ್ತ ಆಗುವ ಉರಿಯಿಂದ ಬಾವು ಬಂದು ಜಠರನಾಳದಲ್ಲಿ ಆಹಾರ ಸರಾಗವಾಗಿ ಚಲಿಸದಂತಾಗಬಹುದು. ಅಲ್ಲದೆ ಕರುಳಿನ ಹುಣ್ಣು ಪದೇಪದೇ ಬಂದು ವಾಸಿಯಾಗುತ್ತ, ಮರುಕಳಿಸುತ್ತ ಬಂದುದರ ಫಲವಾಗಿ ಜಠರನಾಳದ ಲೋಳ್ಪರೆ ಮತ್ತು ಅಲ್ಲಿನ ಸ್ನಾಯು ಮುರುಟಿಕೊಂಡು ಜಠರನಾಳದ ಗಾತ್ರ ತುಂಬಾ ಕಿರಿದಾಗಿ ಆಹಾರ ಮುಂದೆ ಸಾಗದಂತಾಗುವುದು (pyloric stenosis). ಅದರ ಪರಿಣಾಮವಾಗಿ ಆಹಾರ ಮುಂದೆ ಹೋಗದೆ ಜಠರಕೋಶವನ್ನು ವಿಸ್ತಾರವಾಗಿ ಹಿಗ್ಗಿಸುವುದು. ಪದೇಪದೇ ವಾಂತಿ ಬರುವುದು. ಅದ

ರಿಂದಲೇ ರೋಗಿಗೆ ಸಮಾಧಾನ. ೨೪ ಘಂಟೆಗಳಿಗಿಂತ ಮುಂಚಿತವಾಗಿ ತೆಗೆದುಕೊಂಡ ಆಹಾರ ಸಹ ಹಿಂದಕ್ಕೆ ವಾಂತಿಯಲ್ಲಿ ಬರುತ್ತದೆ. ಆಹಾರದ ನ್ಯೂನತೆಯ ಲಕ್ಷಣಗಳು ತಲೆದೋರಿ ತೂಕದ ಇಳುವರಿಯಾಗುತ್ತದೆ. ವಾಂತಿಯಲ್ಲಿ ಲವಣದ ಅಂಶಗಳು, ನೀರು ಕಳೆದುಹೋಗುವುದರಿಂದ ನಿತ್ರಾಣ ಮತ್ತು ಕ್ಷಾರತ್ವ (alkalosis) ತಲೆದೋರುತ್ತದೆ. ಕಿರಿದಾದ ಜಠರ ನಾಳದ ಫಲವಾಗಿ ಹೊಟ್ಟೆಯಲ್ಲಿ ಗಂಟು ಕಾಣಿಸಿಕೊಂಡು ಅದು ಆಹಾರ ಅಥವಾ ನೀರು ಸೇವನೆಯ ನಂತರ ಎದೆಗೂಡಿನ ಎಡಭಾಗದ ಕೆಳಗೆ ಇರುವ ಹೊಟ್ಟೆಯಿಂದ ಬಲಭಾಗಕ್ಕೆ ಚಲಿಸಿಹೋಗುತ್ತದೆ. ನೀರು ತುಳುಕಿದಂತಹ ಶಬ್ದ ಆಹಾರ ತೆಗೆದುಕೊಂಡ ನಾಲ್ಕು ಗಂಟೆಗಳ ಅನಂತರವೂ ಹೊಟ್ಟೆಯನ್ನಲುಗಿಸಿದಾಗ ಕೇಳಿಬರುತ್ತದೆ.

ಕೆಲವು ಬಾರಿ ಜಠರದ ಹುಣ್ಣುಗಳು ವಿಸ್ತೃತವಾಗಿ ಕ್ಯಾನ್ಸರ್‌ನಂತೆ ಬೆಳೆದು ಶಮನಗೊಳ್ಳದ ನೋವು, ಹಸಿವಿಲ್ಲದಿರುವಿಕೆ, ದಿನೇದಿನೇ ಇಳಿಮುಖವಾಗುತ್ತಿರುವ ತೂಕ ಮತ್ತು ದೇಹಸ್ಥಿತಿ ಹಾಗೂ ರಕ್ತ ಕಾರಿಕೆ—ಈ ಗುಣಲಕ್ಷಣಗಳ ಮೂಲಕ ತೋರ್ಪಡಿಸಬಹುದು. ಇಂತಹ ಕ್ಯಾನ್ಸರ್ ಬೆಳವಣಿಗೆ ಕರುಳ ಹುಣ್ಣಿನಲ್ಲಿ ಯಾವ ಕಾಲಕ್ಕೂ ತೋರಿಬರುವುದಿಲ್ಲ.

ಪದೇಪದೇ ಮರುಕಳಿಸಿ ಬರುವ ಹುಣ್ಣುಗಳು, ಲೋಳ್ಪರೆ ಮತ್ತು ಸ್ನಾಯುವಿನ ಸವಕಳಿಗೆ ಕಾರಣವಾಗಿ ಆ ಪ್ರದೇಶ ಮುರುಟಿಕೊಂಡು ಜಠರಕೋಶದ ಗಾತ್ರವನ್ನು ಪರಿಣಾಮಕಾರಿ

ಯಾಗಿ ಕಿರಿದುಗೊಳಿಸಬಲ್ಲುದು. ಅಲ್ಲದೆ ಹುಣ್ಣುಗಳು ಆಳವಾಗಿ ಇಳಿದು ಮೇದೋಜೀರಕ ಗ್ರಂಥಿ ಮತ್ತು ಇತರ ಸುತ್ತಲಿನ ಪ್ರದೇಶಗಳೊಡನೆ ಹೊಂದಿಕೊಂಡು ಬೆಳವಣಿಗೆ ಹೊಂದಿದಾಗ, ನೋವು ಸದಾ ಇರಹತ್ತಿ, ಬೆನ್ನಿನ ಕಡೆಗೆ ಹಬ್ಬುಗೆ ಹೊಂದಿದ ತೀವ್ರ ತೆರನಾದ ನೋವಿನ ರೂಪದಲ್ಲಿ ಕಾಣಿಸಿಕೊಳ್ಳಬಹುದು.

೫. ಪರೀಕ್ಷೆಗಳು

ಜಠರಕೋಶ ಮತ್ತು ಸಣ್ಣ ಕರುಳಿನ ಆದಿಭಾಗವನ್ನು ಅಭ್ಯಸಿಸಬೇಕಾದರೆ ಬೇರಿಯಂ ಊಣಿಸ (Barium meal)ನ್ನು ಕೊಟ್ಟು ಹೊಟ್ಟೆಯ ಕ್ಷ-ಕಿರಣ (x-ray) ಚಿತ್ರವನ್ನು ತೆಗೆಯ ಬೇಕು. ಅದನ್ನು ತೆಗೆಯುವ ಮುನ್ನ ಎಂಟು ಘಂಟೆಗಳ ಅವಧಿ ಯಲ್ಲಿ ಯಾವುದೇ ಆಹಾರವನ್ನು ಸೇವಿಸದೆ ಬರೀ ಹೊಟ್ಟೆಯ ಲ್ಲಿರಬೇಕು. ಸ್ವಲ್ಪವೇ ಬೇರಿಯಂನ್ನು ತೆಗೆದುಕೊಂಡ ಮೇಲೆ ಜಠರಕೋಶದ ರೂಪವನ್ನು ಪಟಲ (screen)ದ ಮೇಲೆ ನೋಡಬಹುದು. ಅಲೆಅಲೆಯಂತೆ ತೋರುವ ಜಠರದ ಸಂಕು ಚನ ಕ್ರಿಯೆಯನ್ನು ನೋಡಬಹುದಲ್ಲದೆ, ಆ ಪ್ರದೇಶವನ್ನು ಒತ್ತಿದಾಗ ನೋವು ಉಂಟಾಗುವುದನ್ನು ತಿಳಿಯಬಹುದು. ಚಿತ್ರ ತೆಗೆದಾಗ ಹುಣ್ಣಿರುವ ಪ್ರದೇಶದಲ್ಲಿ ಬೇರಿಯಂ ಹುದುಗಿ ಕೊಂಡು ಹಳ್ಳದಂತೆ ಹೊರಕ್ಕಿಳಿದು ನಿಲ್ಲುವುದು. ಅದರ ವಿರುದ್ಧ ಪಾರ್ಶ್ವದಲ್ಲಿನ ಸ್ನಾಯು ಸಂಕುಚನ ಕ್ರಿಯೆಯ ಫಲವಾಗಿ ಒಂದು ತಗ್ಗು ಸಹ ತೋರಿಬರುವುದು. ವಕ್ರಕರುಳಿನ ಕವಚ

(cap) ಹುಣ್ಣಿನಿಂದ ವಿಕೃತಗೊಳ್ಳುತ್ತದೆಯಲ್ಲದೆ, ಹುಣ್ಣಿನಿಂದಾದ ಗುಂಡಿಯಲ್ಲಿ ನಿಂತ ಬೇರಿಯಂ ಎದ್ದು ಕಾಣುತ್ತದೆ. ಜಠರನಾಳ ಕಿರಿದುಗೊಂಡಿದ್ದರೆ ಜಠರದಲ್ಲಿನ ಬೇರಿಯಂ ತೆರವಾಗಲು ೬ರಿಂದ ೧೨ ಘಂಟೆಗಳಷ್ಟು ಕಾಲ ಹಿಡಿಯಬಲ್ಲುದು.

ಅಂಶತಃ ಪರೀಕ್ಷಾ ಊಟ (Fractional test meal) ವನ್ನು ಜಠರಕೋಶದ ಕಾರ್ಯಚಟುವಟಿಕೆಯನ್ನು ಪರಿಶೀಲಿಸಲು ಉಪಯೋಗಿಸಲಾಗಿದೆ. ಇದರ ಫಲಶ್ರುತಿಯನ್ನು ಈಗ ಪ್ರಶ್ನಿಸಲಾಗುತ್ತಿದ್ದರೂ ಈ ರೀತಿಯ ಉಣಿಸಿನ ಪರೀಕ್ಷೆ ಜಠರಕೋಶದಲ್ಲಿನ ಆಮ್ಲದ ಪ್ರಮಾಣವನ್ನು ಕಂಡುಹಿಡಿಯಲು ಸಹಕಾರಿಯಾಗಿದೆ. ಇದನ್ನು ಮಾಡುವಾಗ ಹಿಂದಿನ ಸಂಜೆಯಿಂದ ಯಾವ ಆಹಾರ ಬೇಡ. ಮೂಗಿನ ಹೊಳ್ಳೆಯ ಮೂಲಕ ಸೇರಿಸಿದ, ಎತ್ತ ಕಡೆ ಮಣಿಸಿದರೂ ಬಗ್ಗಬಲ್ಲ ರಬ್ಬರ್ ನಳಿಗೆ (Ryle's tube) ಯನ್ನು ನುಂಗಿ ಹೊಟ್ಟೆಗೆ ಸೇರುವಂತೆ ಮಾಡಬೇಕು. ಅನಂತರ ಅದರ ಮೂಲಕ ಉಪವಾಸವಿದ್ದ ಕಾಲದಲ್ಲಿ ಶೇಖರಗೊಂಡ ಜಠರರಸ (fasting juice) ವನ್ನು ಎಳೆಯಬೇಕು. ಸಾಮಾನ್ಯವಾಗಿ ಒಂದು ಚಿಕ್ಕ ಲೋಟದಷ್ಟು ಇರುವ ಈ ರಸ, ಕಿರಿದುಗೊಂಡ ಜಠರನಾಳ ಎದ್ದಾಗ, ತುಂಬಾ ವಿಪುಲವಾಗುವುದಲ್ಲದೆ, ಅಪಚನ ಆಹಾರವನ್ನೊಳಗೊಂಡಿರುತ್ತದೆ. ಅದಾದ ಮೇಲೆ ನೀರನ್ನು ಸೇರಿಸಿ ಜಠರಕೋಶವನ್ನು ತೊಳೆಯಬೇಕು. ಇದರಿಂದ ಆಮ್ಲದ ಪ್ರಮಾಣ ಕಡಿಮೆಯಾಗುತ್ತದೆ. ಇದರ ತರುವಾಯ ಅರ್ಧ ಲೀಟರ್‌ನಷ್ಟು ಗಂಜಿ ಅಥವಾ ಅಂಬಲಿ

ಯನ್ನು ಕುಡಿಸಬೇಕು. ಆಮೇಲೆ ೧೫ ನಿಮಿಷಗಳಿಗೊಂದಾವರ್ತಿ ಎರಡು ಘಂಟೆಗಳ ಪರ್ಯಂತ ೧೦ ಮಿಲಿ ಲೀಟರ್‌ನಷ್ಟು ಜಠರರಸವನ್ನು ಹೊರಕ್ಕೆಳೆಯಬೇಕು. ಅದನ್ನು ಪರೀಕ್ಷಿಸಿದಾಗ ಅದರಲ್ಲಿರುವ ಆಮ್ಲ ಪ್ರಮಾಣ ಹಾಗೂ ಹೈಡ್ರೋಕ್ಲೋರಿಕ್ ಆಮ್ಲದ ಪ್ರಮಾಣ ತಿಳಿಯುತ್ತದೆ. ಕರುಳ ಹುಣ್ಣಿನಲ್ಲಿ ಆಮ್ಲ ಪ್ರಮಾಣ ವಿಪುಲವಾಗಿರುತ್ತದೆ. ಜಠರ ಹುಣ್ಣುಗಳಲ್ಲಿ ಅದರ ಅಂಶ ಸಾಮಾನ್ಯದಷ್ಟಿರುತ್ತದೆ. ಚರ್ಮದ ಕೆಳಗೆ, ರಸಸಿದ್ಧತೆಗೆ ಪ್ರಬಲ ಉತ್ತೇಜನಕಾರಿಯಾದ ಹಿಸ್ಟಮೀನ್‌ನ್ನು ೦.೫ ಮಿಲಿ ಗ್ರಾಂನಷ್ಟು ಚುಚ್ಚಿ, ಅನಂತರ ಪರೀಕ್ಷಿಸಿದಾಗ ಆಮ್ಲದ ವಿಪುಲತೆ ಗೋಚರಿಸುತ್ತದೆ. ಅದರ ಪ್ರಭಾವದಿಂದ ಜಠರಕೋಶದ ಎಲ್ಲ ಆಮ್ಲ ಕಣಗಳು ಉತ್ತೇಜನಗೊಂಡು ಆಮ್ಲವನ್ನೊಸರುತ್ತವೆ.

ಬೇರಿಯಂ ಚಿತ್ರದಲ್ಲಿ ಹುಣ್ಣು ಗೋಚರಿಸದಿದ್ದರೆ ಇಲ್ಲವೆ ಹುಣ್ಣು ಮಾಯುತ್ತಿರುವುದನ್ನು ಪರಿಶೀಲಿಸಬೇಕಾದಾಗ ಮತ್ತು ಕ್ಯಾನ್ಸರ್‌ನಂತೆ ಜಠರದ ಹುಣ್ಣುಗಳು ಬೆಳವಣಿಗೆ ಹೊಂದುತ್ತಿರುವುದನ್ನು ಶಂಕಿಸಿದಾಗ, ಮಣಿಯುವ ಜಠರದರ್ಶಿನಿ (gastroscope) ಯ ಮೂಲಕ ಸ್ವತಃ ನೋಡಬಹುದು.

ಹುಣ್ಣು ಇದ್ದ ಕಾಲದಲ್ಲಿ ಅಗೋಚರವಾಗಿ ವಿಸರ್ಜಿಸಲ್ಪಡುವ ರಕ್ತದ ಇರುವಿಕೆಯನ್ನು ರಸಾಯನ ಪರೀಕ್ಷೆಗಳಿಂದ ದೃಢಪಡಿಸಿಕೊಳ್ಳಬಹುದು.

೬. ಮುನ್ನೋಟ

ಸಾಮಾನ್ಯವಾಗಿ ಹೊಟ್ಟೆಯ ಹುಣ್ಣಿನಿಂದ ಜೀವಹಾನಿಯಿಲ್ಲ. ಇದರ ನೋವನ್ನು ಅನುಭವಿಸುವ ಎಷ್ಟೋ ಮಂದಿ ತುಂಬು ಜೀವನ ನಡೆಸುವರು. ಆದರೆ ಪದೇ ಪದೇ ಬರುವ ನೋವಿನಿಂದ ಕಾರ್ಯಶಕ್ತಿಗೆ ವ್ಯತ್ಯಯ ಉಂಟಾಗಿ ದುಡಿತದ ದಿನಗಳು ಕಡಿಮೆಯಾಗುತ್ತವೆ. ಹುಣ್ಣು ವರುಷದ ಕೆಲದಿನಗಳು ಉಲ್ಬಣಗೊಂಡು ನೋವಿನ ಗುಣಲಕ್ಷಣಗಳನ್ನು ಪದೇಪದೇ ತೋರ್ಪಡಿಸುತ್ತದೆ. ಅವು ರೋಗದ ನೈಸರ್ಗಿಕ ಬೆಳವಣಿಗೆಗೆ ಅನುಗುಣವಾಗಿ ಇಲ್ಲವೆ ಚಿಕಿತ್ಸೆಯ ಫಲವಾಗಿ ಗುಣ ಹೊಂದುತ್ತವೆ.

ಜಠರ ಹುಣ್ಣುಗಳಿಂದ ಸಾಯುವವರ ಸಂಖ್ಯೆ ಕರುಳು ಹುಣ್ಣಿನವರಿಗಿಂತಲೂ ಜಾಸ್ತಿ. ತೂತು ಬೀಳುವಿಕೆ, ರಕ್ತೋದ್ರೇಕ ಕರುಳು ಹುಣ್ಣುಗಳಲ್ಲಿ ಹೆಚ್ಚು. ಮಧ್ಯ ವಯಸ್ಸು ದಾಟಿದ ಮೇಲೆ ಇಂತಹ ತೊಡಕುಗಳು ಉದ್ಭವವಾದರೆ ಅವು ಜೀವಕ್ಕೆ ಗಂಡಾಂತರಕಾರಿಯಾಗಿ ಪರಿಣಮಿಸುತ್ತವೆ.

ರೋಗಿಯ ಆರ್ಥಿಕ ಸ್ಥಿತಿ, ಕುಟುಂಬ ಚರಿತ್ರೆ ಮತ್ತು ಮಾನಸಿಕ ಸ್ವಾಸ್ಥ್ಯ ರೋಗದ ಮುನ್ನೋಟದ ಮೇಲೆ ಪರಿಣಾಮ ಬೀರುತ್ತವೆ. ಔಷಧ ಚಿಕಿತ್ಸೆಯಿಂದ ಅನೇಕರು ನೋವಿನ ಗುಣಲಕ್ಷಣಗಳಿಂದ ಸ್ವಾತಂತ್ರ್ಯವನ್ನು ಪಡೆಯುವರು. ಅವರಲ್ಲಿ ಹುಣ್ಣು ಮಾಯುತ್ತದೆ. ಆದರೂ ಆಹಾರ–ಪಾನೀಯಗಳ ಬದಲಾವಣೆಯ ಫಲವಾಗಿ ಇಲ್ಲವೆ ಇನ್ನಿತರ ಕಾರಣಗಳಿಂದಾಗಿ ಹುಣ್ಣು ಮರುಕಳಿಸಿ ಬರಬಲ್ಲುದಾಗಿದೆ. ಶಸ್ತ್ರ ಚಿಕಿತ್ಸೆಯು ಶಾಶ್ವತವಾಗಿ ನೋವು ಬಾರದಂತೆ ಹೆಚ್ಚಿನ ಸಂಖ್ಯೆಯ ರೋಗಿಗಳಲ್ಲಿ ಮಾಡಬಲ್ಲುದು; ಅದರಿಂದ ಕೆಲವೊಂದು ತೊಡಕುಗಳು ಬರಬಹುದಾದುದರಿಂದ ರೋಗದ ಚಿಕಿತ್ಸೆಯನ್ನು ವಿವಿಧ ಮುಖಗಳಿಂದ ನಡೆಸಬೇಕು.

೭. ಚಿಕಿತ್ಸೆ

ಹೊಟ್ಟೆಯ ಹುಣ್ಣುಗಳ ಚಿಕಿತ್ಸೆಯು ಸಮರ್ಪಕವಾಗಿ ಹಾಗೂ ಯಶಸ್ವಿಯಾಗಬೇಕಾದರೆ ಅದು ಜಠರ ರಸದ ಆಮ್ಲದ ಉತ್ಪಾದನೆಯ ಮೇಲೆ, ಅಲ್ಲಿನ ನರತಂತು ಹಾಗೂ ರಸದೂತಗಳ ಮೇಲೆ ಮತ್ತು ಮನೋದೈಹಿಕ ಗುಣಲಕ್ಷಣಗಳ ಮೇಲೆ ತನ್ನ ಪ್ರಭಾವವನ್ನು ಬೀರಬೇಕು. ಪ್ರಮಾಣಬದ್ಧವಾಗಿ ನಡೆಸುವ ಚಿಕಿತ್ಸೆಯು ಜಠರ ರಸದ ಆಮ್ಲದ ಉತ್ಪಾದನೆಯನ್ನು ಕಡಿಮೆ ಮಾಡುತ್ತದೆ ಮತ್ತು ಲೋಳ್ಪರೆಯ ನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ.

ಹುಣ್ಣಿನ ಚಿಕಿತ್ಸೆಯು ಮೂರು ಮುಖ್ಯ ಅಂಶಗಳನ್ನೊಳಗೊಂಡಿದೆ. ನೋವನ್ನು ಶಮನ ಮಾಡಿ ಅದರ ಗುಣಲಕ್ಷಣಗಳನ್ನು ದೂರಮಾಡುವಿಕೆ, ಹುಣ್ಣಿನ ಮಾಯುವಿಕೆಯಲ್ಲಿ ಸಹಕಾರ ಮತ್ತು ಹುಣ್ಣು ಮರುಕಳಿಸದಂತೆ ತಡೆ. ಚಿಕಿತ್ಸಾರೂಪದಲ್ಲಿ ಕೊಡುವ ಆಹಾರ ಮತ್ತು ಔಷಧಗಳ ಸೇವನೆ ಆಮ್ಲದ ಪ್ರಮಾಣವನ್ನು ಕಡಿಮೆ ಮಾಡುತ್ತದೆ. ಜಠರದ ಸಂಕುಚನ

ವನ್ನು ಕಡಿಮೆ ಮಾಡಿ, ಹೆಚ್ಚು ವಿಶ್ರಾಂತಿಯನ್ನು ನೀಡುತ್ತದೆ. ಜಠರದಲ್ಲಿನ ಆಮ್ಲ ಹುಣ್ಣಿನ ಮಾಯುವಿಕೆಯಲ್ಲಿ ಪ್ರಮುಖ ವಾದ ಕಾರಣವಾದುದರಿಂದ ಅದರ ಉತ್ಪಾದನೆಯನ್ನು ಪೂರ್ಣ ವಾಗಿ ಹಿಡಿತದಲ್ಲಿ ತರಬೇಕು. ರೋಗಿಯ ಆಹಾರದ ಮೂಲಕ ದೈಹಿಕ ಬಲವನ್ನು ಪಡೆಯಬೇಕು. ಹೊಟ್ಟೆಯನ್ನು ಬಹಳ ಹೊತ್ತಿನ ವರೆಗೆ ಬರಿದಾಗಿರಿಸಬಾರದು. ಅದನ್ನು ಉರಿಯ ನ್ನುಂಟುಮಾಡದ, ಯಾಂತ್ರಿಕ ತೊಂದರೆ ಹಾಗೂ ರಾಸಾಯನಿಕ ಬದಲಾವಣೆಗಳನ್ನು ಉಂಟುಮಾಡದ ಆಹಾರದಿಂದ ಆಗಾಗ್ಗೆ ತುಂಬಿಸುತ್ತಲೇ ಇರಬೇಕು.

ಅನೇಕ ಹುಣ್ಣುಗಳು ನಮ್ಮ ಜೀವಿತ ಅವಧಿಯಲ್ಲಿ ಬರ ಬಹುದಾಗಿವೆ. ಅವು ಯಾವುದೇ ಗುಣಲಕ್ಷಣಗಳನ್ನು ತೋರ್ಪ ಡಿಸದೆ ತಮ್ಮಷ್ಟಕ್ಕೆ ತಾವೇ ಮಾಯ್ದು ಹೋಗುತ್ತವೆ. ಮಾನಸಿಕ ಸ್ವಾಸ್ಥ್ಯ ಕಾಪಾಡಿಕೊಳ್ಳುವಿಕೆ, ಸ್ಥಳ ಮತ್ತು ಕಾರ್ಯದ ಆವರಣದ ಬದಲಾವಣೆ, ಕಾಲಕಾಲಕ್ಕೆ ಆಹಾರಸೇವನೆ ಹಾಗೂ ದೇಹಕ್ಕೆ ಸೇರದ ಪದಾರ್ಥಗಳನ್ನು ಸೇವಿಸದಿರುವಿಕೆಯಿಂದ ಅವು ಗುಣ ಹೊಂದುತ್ತವೆ.

ನೋವಿನ ಗುಣಲಕ್ಷಣಗಳನ್ನು ಶಮನ ಮಾಡುವುದು ಸಾಧ್ಯ. ಹುಣ್ಣನ್ನು ಚಿಕಿತ್ಸಾ ವಿಧಾನಗಳಿಂದ ಮಾಯಿಸಬಹುದು. ಹುಣ್ಣಿನ ನೈಸರ್ಗಿಕ ಬೆಳವಣಿಗೆಯನ್ನು ಅಭ್ಯಸಿಸಿದಾಗ ಅದು ಮರುಕಳಿಸಿ ಬರಬಹುದಾದ ಪ್ರಮೇಯಗಳು ವಿಪುಲವಾಗಿರುವು

ದರಿಂದ ಅದರ ಬಗ್ಗೆ ಸದಾ ಎಚ್ಚರಿಕೆಯಿಂದ ಇರಬೇಕು. ಅದಕ್ಕಾಗಿಯೇ ಈ ರೋಗದ ಬಗ್ಗೆ ರೋಗಿಗೆ ಪೂರ್ಣ ಮಾಹಿತಿಯನ್ನು ಕೊಡಬೇಕು. ಹುಣ್ಣು ಚಿರಕಾಲ ಸಂಗಾತಿಯಾಗಿ ಇರಬಹುದಾದುದರಿಂದ ಅದರೊಟ್ಟಿಗೆ ಕೆಲವೊಂದು ಆಹಾರ ನಿಯಮಗಳಿಗೆ ಒಳಪಟ್ಟು ಜೀವನ ಮಾಡಬೇಕು. ಹುಣ್ಣು ಸರಿಯಾಗಿ ಮಾಯದಿದ್ದರೆ ಅದು ಮರುಕಳಿಸಿ ಬರುವುದು ಸ್ವಾಭಾವಿಕವಾದುದರಿಂದ ಅದರ ಚಿಕಿತ್ಸೆ ಸಂಪೂರ್ಣವಾಗಿ ಆಗಬೇಕು.

ವಿಶ್ರಾಂತಿ : ಇದು ಹೊಟ್ಟೆಗೆ, ಮನಸ್ಸಿಗೆ ಮತ್ತು ದೇಹಕ್ಕೆ ಅತ್ಯಗತ್ಯ. ಮೊದಲಬಾರಿ ಹುಣ್ಣಿನ ನೋವು ತೀವ್ರ ತೆರನಾಗಿ ಬಂದಾಗ್ಗೆ ಹಾಸಿಗೆಯಲ್ಲಿದ್ದು ವಿಶ್ರಾಂತಿಯನ್ನು ಪಡೆಯ್ರಬೇಕು. ಆ ಅವಧಿ ಆರು ವಾರಗಳಷ್ಟಾದರೂ ಇರಬೇಕು. ಮನೆಯಲ್ಲಿ ಓಡಾಡುತ್ತ ಚಿಕಿತ್ಸೆಯನ್ನು ಪಡೆಯುವುದು ಅಷ್ಟೊಂದು ಸಮರ್ಪಕವಲ್ಲ; ಆಸ್ಪತ್ರೆಯಲ್ಲಿರುವುದು ಒಳ್ಳೆಯದು. ಅದರಿಂದ ಚಿಕಿತ್ಸೆಯನ್ನು ಸರಿಯಾಗಿ ಕೈಕೊಳ್ಳಬಹುದು. ಇದರ ಫಲವಾಗಿ ಮನೆಯ ಜವಾಬ್ದಾರಿಯಿಂದ, ಇನ್ನಿತರ ಕೌಟುಂಬಿಕ ಚಿಂತೆಗಳಿಂದ, ಕೆಲಸದ ಹೊರೆಯಿಂದ ಬಿಡುಗಡೆ ದೊರೆಯುತ್ತದೆ. ಆವರಣದ ಬದಲಾವಣೆಯ ಫಲವಾಗಿ ದೈಹಿಕ ಮತ್ತು ಮಾನಸಿಕ ವಿಶ್ರಾಂತಿ ದೊರೆಯುತ್ತದೆ. ಇದು ಹುಣ್ಣು ಮಾಯಲು ತುಂಬಾ ಸಹಕಾರಿ. ಅಲ್ಲಿನ ವಾತಾವರಣ ರೋಗಿಗೆ ಹೊಸ ಭರವಸೆಯನ್ನು ನೀಡುವುದು.

ಉದ್ವೇಗ, ಚಿಂತೆ, ವ್ಯಾಕುಲತೆ, ಗಡಿಬಿಡಿ, ಒತ್ತಡಕ್ಕೆ ಸಿಲುಕಿದ ವ್ಯಕ್ತಿಗೆ ಕೆಲದಿನಗಳಾದರೂ ಸಂಪೂರ್ಣ ವಿಶ್ರಾಂತಿ

ಬೇಕು. ಮನಸ್ಸಿಗೆ ಹಿತಕರವಲ್ಲದ ಸುದ್ದಿ, ಬೇಸರಗೊಳಿಸುವ ಮಾತುಕತೆ ಈ ಕಾಲದಲ್ಲಿ ಬೇಡ. ಮೊದಲಿನ ಎರಡು-ಮೂರು ವಾರಗಳು ರೋಗಿ ಹಾಸಿಗೆಯಲ್ಲಿದ್ದು ವಿಶ್ರಾಂತಿಯನ್ನು ಪಡೆಯಬೇಕು. ಆ ಕಾಲದಲ್ಲಿ ಕೊಠಡಿಯಲ್ಲಿ ತಿರುಗಾಟ, ಸ್ನಾನ, ಇನ್ನಿತರ ದೈನಂದಿನ ಚಟುವಟಿಕೆಗಳನ್ನು ಮಾತ್ರ ಮಾಡಬಹುದು. ಈ ಕಾಲದಲ್ಲಿ ಧೂಮಪಾನ ಸಲ್ಲದು. ಧೂಮಪಾನವನ್ನು ಬರಿಯ ಹೊಟ್ಟೆಯ ಮೇಲೆ ಮಾಡಿದರೆ ಅದು ಆಮ್ಲದ ಸಿದ್ಧತೆಗೆ ಪ್ರಚೋದನೆ ನೀಡುತ್ತದೆ. ಪೂರ್ಣವಾಗಿ ಸೇದುವುದನ್ನು ವರ್ಜ್ಯ ಮಾಡಿದರೆ ಬಹಳ ಒಳ್ಳೆಯದು. ಅದು ಸಾಧ್ಯವಾಗದಿದ್ದರೆ ಹೊಟ್ಟೆ ತುಂಬಿದ ಮೇಲೆ ಊಟದ ಅನಂತರ ಸೇದಬಹುದು.

ಆಹಾರ :ಊಟದ ನಡುವೆ ಆಗಾಗ್ಗೆ ಒಂದಿಷ್ಟು ತಿನಿಸು ಹುಣ್ಣಿನ ವಾಯುವಿಕೆಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುವುದು. ಪ್ರಾಚೀನ ಕಾಲದಿಂದಲೂ ಮಿದುವಾದ, ಗಾಸಿಯನ್ನುಂಟುಮಾಡದಂತಹ ಆಹಾರವಾದ ಹಾಲನ್ನು ತೆಗೆದುಕೊಳ್ಳುವ ಪರಿಪಾಠ ನಡೆದುಕೊಂಡು ಬಂದಿದೆ. ರೋಗದಿಂದ ನೋವು ಉಲ್ಬಣಿಸಿದಾಗ ಒಂದು ಅಥವಾ ಎರಡು ಘಂಟೆಗಳಿಗೊಂದಾವರ್ತಿ ಕೆನೆ ಮಿಶ್ರಿತ ಹಾಲನ್ನು ತೆಗೆದುಕೊಳ್ಳಬೇಕು. ಇದು ಲೋಳ್ಪರೆಗೆ ಏನನ್ನೂ ತೆರೆದು ಘಾಸಿ ಮಾಡುವುದಿಲ್ಲ. ಕ್ಷಾರ ಗುಣವನ್ನು ಹೊಂದಿರುವುದರಿಂದ ಆಮ್ಲದೊಡನೆ ಸಂಯೋಗ ಹೊಂದಿ ಅದರ ಪ್ರಭಾವವನ್ನು ತಗ್ಗಿಸಬಲ್ಲದು;

ಅವರಲ್ಲಿನ ಕೊಬ್ಬಿನ ಅಂಶಗಳು ಜಠರ ಸ್ನಾಯುವಿನ ಸಂಕುಚನ ಕ್ರಿಯೆಯ ಮೇಲೆ ಪರಿಣಾಮ ಬೀರಿ ಹೊಟ್ಟೆಯನ್ನು ತೀವ್ರ ವಾಗಿ ಬರಿದುಗೊಳಿಸದು. ಮೇಲಾಗಿ ಅದು ಸುಲಭವಾಗಿ ಪಚನಗೊಳ್ಳುತ್ತದೆ.

ಆಹಾರ ದೈಹಿಕ ಕೆಲಸಗಳಿಗೆ ಅಗತ್ಯವಾದ ಉಷ್ಣತೆಯನು ಉತ್ಪತ್ತಿ ಮಾಡುವಂತಹದೂ ಮತ್ತು ಜೀವಸತ್ವಗಳನ್ನು ಒಳ ಗೊಂಡುದೂ ಆಗಿರಬೇಕು. ಆಹಾರವನ್ನು ಸ್ವಲ್ಪ ಸ್ವಲ್ಪ ಮತ್ತು ಆಗಾಗ್ಗೆ ತೆಗೆದುಕೊಳ್ಳುವುದರಿಂದ, ಊಟದ ಮೊದಲು ತೋರಿಬರುವ ಆಮ್ಲದ ಗರಿಷ್ಠ ಪ್ರಮಾಣವನ್ನು ಕಡಿಮೆ ಮಾಡುತ್ತದೆ. ಅಲ್ಲದೆ ಆಹಾರದಲ್ಲಿನ ಸಸಾರಜನಕ ಪದಾರ್ಥ ಗಳು ಆಮ್ಲದ ಇಳುವರಿಗೆ ಉತ್ತೇಜನವೀಯುತ್ತವೆ.

ಸಂಬಾರ ಮತ್ತು ಮಸಾಲೆಯ ಪದಾರ್ಥಗಳು, ಖಾರದ ಪದಾರ್ಥಗಳು, ಕಾಫಿ, ಚಹಾ, ಮಾದಕ ಪಾನೀಯಗಳು, ಆಮ್ಲದ ತಯಾರಿಕೆಯನ್ನು ಹೆಚ್ಚು ಮಾಡುತ್ತವೆ. ಚೆನ್ನಾಗಿ ಜೀರ್ಣವಾಗದ ಪದಾರ್ಥಗಳು ಜಠರವನ್ನು ಹಿಗ್ಗಿಸಿ ಎಳೆಯು ವುದರಿಂದ ಹುಣ್ಣಿನ ನೋವು ಕಂಡುಬರುವುದಲ್ಲದೆ ಆಮ್ಲದ ತಯಾರಿಕೆಯನ್ನು ಹೆಚ್ಚು ಮಾಡುತ್ತವೆ. ಮಸಾಲೆಯಿಂದ ಕೂಡಿ ಬಾಯಲ್ಲಿ ನೀರೂರಿಸುವಂತಹ ಆಹಾರ ನರತಂತುವನ್ನು ಉದ್ದೀ ಪನಗೊಳಿಸಿ ಆಮ್ಲದ ಹೆಚ್ಚುವರಿ ಉತ್ಪಾದನೆಗೆ ಕಾರಣೀಭೂತ ವಾಗುವುದರಿಂದ ಅದರ ಸೇವನೆ ಬೇಡ.

ಜಠರರಸವೇ ಹುಣ್ಣು ಮಾಯುವಿಕೆಯಲ್ಲಿ ಪ್ರಮುಖ ಅಡ್ಡಿ. ಅದಕ್ಕೆ ದಹಿಸುವ ಮತ್ತು ಪಚನಗೊಳಿಸುವ ಅಪೂರ್ವ ಶಕ್ತಿಯಿದೆ. ಇದರ ಪ್ರಭಾವವನ್ನು ತೆಗೆದು ಹಾಕದ ಹೊರತು ಹುಣ್ಣು ತೀವ್ರವಾಗಿ ಮಾಯುವುದಿಲ್ಲ. ಈ ಆಮ್ಲದ ಶಕ್ತಿಯನ್ನು ಹಾಲು ಸೇವಿಸುವುದರ ಮೂಲಕ ಸಂಪೂರ್ಣವಾಗಿ ನಾಶಮಾಡಲು ಸಾಧ್ಯ. ಹಾಲೇ ರೋಗಿಗೆ ಪರಿಪೂರ್ಣವಾದ ಆಹಾರ.

ಚಿಕಿತ್ಸೆಯ ಯಾವ ಹಂತದಲ್ಲೂ ರೋಗಿ ಮಾತ್ರ ಹಸಿವೆಯಿಂದ ಬಳಲಲು ಬಿಡಬಾರದು. ಹುಣ್ಣು ರೋಗಿಗೆ ಬೇಕಾದ ಎಲ್ಲ ಅಂಶಗಳನ್ನೂ ಹೊಂದಿದ ಶ್ರೇಷ್ಠವಾದ ಆಹಾರ ಹಾಲು ಮತ್ತು ಕೆನೆ (cream). ರೋಗಿ ಸದಾ ಮತ್ತು ಆಗಾಗ್ಗೆ ಹಾಲನ್ನು ತೆಗೆದುಕೊಳ್ಳುತ್ತಲೇ ಇರಬೇಕು. ತೀವ್ರ ತೆರನಾದ ನೋವು ಶಮನಗೊಳ್ಳದೆ ಪದೇ ಪದೇ ಬರುತ್ತ ರೋಗಿಯ ಸ್ಥಿತಿ ಉಲ್ಬಣಿಸಿದಾಗ ಎರಡು ಘಂಟೆಗಳಿಗೊಂದಾವರ್ತಿ ಹಾಲಿನ ಉಣಿಸನ್ನು ಒಂದು ಲೋಟಾದಷ್ಟು (೫ ಔನ್ಸ್) ತೆಗೆದುಕೊಳ್ಳಬೇಕು. ಇದರೊಡನೆ ೧/೫ ಅಂಶ ಕೆನೆ ಸೇರಿದ್ದರೆ ಒಳ್ಳೆಯದು. ಈ ರೀತಿಯ ಹಾಲು ಸೇವನೆ ಬೆಳಗ್ಗೆಯಿಂದ ರಾತ್ರಿಯ ವರೆಗೆ ಎಚ್ಚರದಿಂದ ಇದ್ದಾಗಲೆಲ್ಲ ಘಂಟೆ, ಎರಡು ಘಂಟೆಗಳಿಗೊಂದಾವರ್ತಿ ತೆಗೆದುಕೊಳ್ಳಬೇಕು, ರಾತ್ರಿ ಎಚ್ಚರವಾದಾಗಲೂ ಒಂದು ಕಪ್ಪು ಹಾಲು ಕುಡಿಯಬೇಕು. ಈ ತೆರನಾಗಿ ಸೇವಿಸುವಾಗ ಒಂದುವೇಳೆ ವಾಂತಿ ಉಂಟಾದರೆ ಹಾಲಿನ ಪ್ರಮಾಣವನ್ನು

ಕಡಿಮೆ ಮಾಡಿ ಸೇವಿಸಬೇಕು. ಅದರಲ್ಲಿ ನೀರನ್ನು ಅರ್ಧ ಅರ್ಧ ಪ್ರಮಾಣದಷ್ಟು ಬೆರೆಸಿ ತೆಗೆದುಕೊಳ್ಳಬೇಕು. ಮೊಟ್ಟೆಯನ್ನು ಸಹ ಆಮ್ಲವಿರೋಧಿ ಆಹಾರವಾಗಿ ಹಾಲಿನ ಬದಲು ಆಗಾಗ್ಗೆ ಸೇವಿಸಬಹುದು. ವಾಂತಿಯ ಫಲವಾಗಿ ಕ್ಲೋರೈಡ್‌ನ ಅಂಶ ಕಡಿಮೆಯಾಗಿ ಆಗಾಗ್ಗೆ ಕ್ಷಾರತ್ವದ ಗುಣಲಕ್ಷಣಗಳು ಕಂಡುಬರ ಬಹುದು. ಆಗ ಸುಸ್ತು, ಆಯಾಸ, ವಾಕರಿಕೆ, ವಾಂತಿ, ಹಸಿವಿಲ್ಲ ದಿರುವಿಕೆ, ಹಾಲಿನ ಮೇಲೆ ಬಯಕೆಯಿಲ್ಲದಿರುವಿಕೆ ತೋರಿಬರ ಬಹುದು. ಆಗ ಉಪ್ಪುನೀರನ್ನು ರಕ್ತನಾಳದ ಮೂಲಕ ಅಥವಾ ಬಾಯಿಂದ ಅಮೋನಿಯಂ ಕ್ಲೋರೈಡನ್ನು ಕೊಡಬೇಕು.

ನೋವು ತೀವ್ರವಾಗಿ ಉಲ್ಬಣಿಸಿದಾಗ ರಬ್ಬರ್ ನಳಿಗೆಯ ಮುಖಾಂತರ ಬಾಟಲಿಯಲ್ಲಿರುವ ಹಾಲನ್ನು ಅಥವಾ ನೀರು ಮತ್ತು ಅಲ್ಯುಮಿನಿಯಂ ಹೈಡ್ರಾಕ್ಸೈಡ್ ಸೇರಿಸಿದ ಹಾಲಿನ ಮಿಶ್ರಣವನ್ನು ಹನಿಹನಿಯಾಗಿ ಜಠರವನ್ನು ಸೇರುವಂತೆ ಮಾಡ ಬೇಕು. ಅದರಿಂದ ಹೊಟ್ಟೆಯಲ್ಲಿನ ಆಮ್ಲದ ಪ್ರಮಾಣವನ್ನು ಸದಾಕಾಲ ಪರಿಣಾಮಕಾರಿಯಾಗಿ ಇಳುವರಿಗೊಳಿಸಬಹುದು. ಇವಲ್ಲದೆ ಕಿತ್ತಳೆ ಹಣ್ಣಿನ ರಸವನ್ನು ಮೂರು ಬಾರಿ ಸೇವಿಸ ಬಹುದು. ಈ ಕಾಲದಲ್ಲಿ ಅಸ್ಕಾರ್ಬಿಕ್ ಆಮ್ಲದ ೫೦ ಮಿಲಿ ಗ್ರಾಂನ ಗುಳಿಗೆಗಳನ್ನು ಎರಡು ಬಾರಿ ಸೇವಿಸುವುದು ಹುಣ್ಣು ಮಾಯುವಿಕೆಯಲ್ಲಿ ಸಹಕಾರಿ.

ಹುಣ್ಣು ಮಾಯ್ದ ಗುಣಲಕ್ಷಣಗಳು ತೋರಿದ ಮೇಲೆ ಪೌಷ್ಟಿಕವಾದ, ಸಪ್ಪೆಯಾದ ಮತ್ತು ಹಗುರವಾದ ಆಹಾರವನ್ನು

ತೆಗೆದುಕೊಳ್ಳಬೇಕು. ನೋವಿನ ತೀವ್ರತೆ ಕಡಿಮೆಯಾದ ಕೆಲವು ದಿನಗಳ ಮೇಲೆ ಬ್ರೆಡ್ ಬೆಣ್ಣೆ, ಬಿಸ್ಕತ್, ಬೇಯಿಸಿದ ರೊಟ್ಟಿ, ಅನ್ನ, ಇಡ್ಲಿ, ದೋಸೆ. ಜೇನುತುಪ್ಪ ಮತ್ತು ಸುಲಭವಾಗಿ ಪಚನಗೊಳ್ಳುವ ತರಕಾರಿಯನ್ನು ತೆಗೆದುಕೊಳ್ಳಬಹುದು. ಮಸಾಲೆ, ಖಾರದ ಪದಾರ್ಥಗಳು ಬೇಡ. ಚಹಾ, ಕಾಫಿ ಸೇವನೆ ನಿಲ್ಲಿಸಿ ಅದರ ಬದಲು ಹಾಲನ್ನು ಸೇವಿಸುವುದು ಒಳ್ಳೆಯದು. ಹಾಲನ್ನು ಮಧ್ಯೆ ಮಧ್ಯೆ ಸೇವಿಸುತ್ತ ಗಟ್ಟಿಯಾದ ಆಹಾರವನ್ನು ದಿನಕ್ಕೆ ಮೂರು ಬಾರಿ ಬೆಳಿಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ತೆಗೆದುಕೊಳ್ಳಬಹುದು.

ಔಷಧಿಗಳು : ಆಮ್ಲ ವಿರೋಧಿ (antacid) ಔಷಧಿಗಳು ಕ್ಷಾರ ವಸ್ತುಗಳಾಗಿದ್ದು ಅವು ರೋಗದ ಗುಣಲಕ್ಷಣಗಳನ್ನು ಶಮನಗೊಳಿಸುವಲ್ಲಿ ತುಂಬ ಸಹಕಾರಿಯಾಗಿವೆ. ಆಮ್ಲದ ಪ್ರಭಾವ ಹುಣ್ಣಿನ ಉಳಿವಿಕೆಗೆ ಅಗತ್ಯವಾದುದರಿಂದ ಅದರ ಶಕ್ತಿಯನ್ನು ಕುಂದಿಸಿದರೆ ಹುಣ್ಣು ಮಾಯುತ್ತದೆ. ಸಾಮಾನ್ಯವಾಗಿ ಬಳಕೆಯಲ್ಲಿರುವ ಸೋಡಾಬೈಕಾರ್ಬ್, ಆಮ್ಲದೊಡನೆ ಸಂಯೋಗ ಹೊಂದಿ ಆಮ್ಲ ತನ್ನ ಗರಿಷ್ಠ ಪ್ರಮಾಣವನ್ನು ತಲುಪದಂತೆ ಮಾಡಬಲ್ಲುದು. ಹೊಟ್ಟೆಯಲ್ಲಿ ನೋವಿನ ಕಸಿವಿಸಿ ಕಂಡಕೂಡಲೇ ಈ ಔಷಧವನ್ನು ತೆಗೆದುಕೊಂಡರೆ, ಕೂಡಲೇ ಅದನ್ನು ಶಮನ ಮಾಡಬಲ್ಲುದು. ಇದು ಲೋಳ್ಪರೆಯಿಂದ ಹೀರಲ್ಪಡುವುದರಿಂದ ಕ್ಷಾರತ್ವ (alkalosis) ವನ್ನು ಉಂಟುಮಾಡಬಲ್ಲುದು. ಅಲ್ಲದೆ ಪದೇ ಪದೇ ಅದನ್ನು ತೆಗೆದು

ಕೊಳ್ಳುತ್ತಿದ್ದರೆ ಆಮ್ಲದ ಒಸರುವಿಕೆಯನ್ನು ಹೆಚ್ಚಿಸಲೂ ಬಹುದಾದ ಅವಗುಣವನ್ನು ಹೊಂದಿದೆ.

ಕರುಳಿನಿಂದ ಹೀರಲ್ಪಡದ ಅನೇಕ ಔಷಧಿಗಳು ಈಗ ಬಳಕೆಯಲ್ಲಿ ಬಂದಿದ್ದು ಅವುಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಬಹುದು. ಕ್ಯಾಲ್ಸಿಯಂ ಕಾರ್ಬೋನೇಟ್, ಮ್ಯಾಗ್ನೀಶಿಯಂ ಕಾರ್ಬೋನೇಟ್, ಮ್ಯಾಗ್ನೀಶಿಯಂ ಹೈಡ್ರಾಕ್ಸೈಡ್, ಮ್ಯಾಗ್ನೀಶಿಯಂ ಟ್ರೈಸಿಲಿಕೇಟ್, ಬಿಸ್ಮತ್ ಕಾರ್ಬೋನೇಟ್, ಅಲ್ಯುಮಿನಿಯಂ ಹೈಡ್ರಾಕ್ಸೈಡ್ ಇವುಗಳ ಎದುರಿನಲ್ಲಿ ಆಮ್ಲದ ಹೆಚ್ಚುವರಿಯಿರುವದಿಲ್ಲ. ಅಲ್ಯುಮಿನಿಯಂ ಹೈಡ್ರಾಕ್ಸೈಡ್‌ನ ಲೋಳೆಯಂತಹ ದ್ರವ ಬಹು ಒಳ್ಳೆಯದೂ ಹಾಗೂ ತೃಪ್ತಿಕರವಾದುದೂ ಆಗಿದೆ.

ಅಲ್ಯುಮಿನಿಯಂ ಹೈಡ್ರಾಕ್ಸೈಡ್ ಸೇರಿಸಿದ ಹಾಲಿನ ಮಿಶ್ರಣವನ್ನು ಹುಣ್ಣಿನ ಗುಣಲಕ್ಷಣಗಳು ಉಲ್ಬಣಿಸಿದಾಗ ರಬ್ಬರ್ ನಳಿಗೆಯ ಮೂಲಕ ಹನಿಹನಿಯಾಗಿ ಕೊಟ್ಟರೆ, ಅದರ ಫಲವಾಗಿ ಸದಾಕಾಲವೂ ಆಮ್ಲದ ಪ್ರಮಾಣ ಕುಗ್ಗುತ್ತದೆಯಲ್ಲದೆ ಮಾನಸಿಕ ಕಾರಣಗಳಿಂದ ಉದ್ಭವವಾಗುವ ರಸದ ಪ್ರಮಾಣ ಇಳುವರಿಗೊಳ್ಳುತ್ತದೆ. ಮ್ಯಾಗ್ನೀಶಿಯಂ ಟ್ರೈಸಿಲಿಕೇಟ್ ಮತ್ತು ಅಲ್ಯುಮಿನಿಯಂ ಹೈಡ್ರಾಕ್ಸೈಡ್ ಇವುಗಳ ಮಿಶ್ರಣದ ಗುಳಿಗೆಗಳನ್ನು, ಹುಣ್ಣು ಮಾಯ್ದ ಮೇಲೂ ಸಹ, ಊಟವಾದ ಮೇಲೆ ಇಲ್ಲವೆ ಯಾವಾಗಲಾದರೂ ನೋವು ಕಾಣಿಸಿಕೊಂಡಾಗ ಬಾಯಲ್ಲಿಟ್ಟು ಜಗಿದು ಅದರ ರಸವನ್ನು ಹೀರಿದರೆ ಹಿತವೆನಿಸುತ್ತದೆ.

ಕಂಟಕಾರಿಕಾ (balladonna) ಗಿಡದ ದ್ರವ ಅಥವಾ ಅದರಿಂದ ಸಿದ್ಧವಾದ ಅಟ್ರೋಪಿನ್ ಜಠರದ ಸಂಕುಚನ ಕ್ರಿಯೆಯನ್ನು ಕಡಿಮೆ ಮಾಡುತ್ತದೆ. ೦.೫ ಮಿಲಿ ಗ್ರಾಂ ಅಟ್ರೋಪಿನ್ ಸಲ್ಫೇಟ್ ಅಥವಾ ೧೦ ರಿಂದ ೩೦ ಹನಿಗಳು ಕಂಟಕಾರಿಕಾ ರಸವನ್ನು ನೀರಿನಲ್ಲಿ ಬೆರೆಸಿ ಮೂರು ಬಾರಿ ದಿನದಲ್ಲಿ ಕೊಡಬೇಕು. ಇದರ ಫಲವಾಗಿ ಬಾಯಿ ಒಣಗಬಹುದು; ದೃಷ್ಟಿಯು ಮಂಜುಗವಿಯಬಹುದು. ಹಾಗೂ ನಾಡಿ ಬಡಿತ ತೀವ್ರವಾಗಬಹುದು. ಇದರ ಸೇವನೆ ರಾತ್ರಿಯ ವೇಳೆಯಲ್ಲಿನ ನೋವಿನ ಶಮನಕ್ಕೆ ತುಂಬಾ ಸಹಕಾರಿ. ಪ್ರೊಪಾಂಥಿಲಿನ್ ಬ್ರೊಮೈಡ್ ಸೇವನೆ ಶಸ್ತ್ರಚಿಕಿತ್ಸೆಯಿಲ್ಲದೆ ಸಂಚಾರಿನರದ ಪ್ರಭಾವವನ್ನು ಕುಗ್ಗಿಸುತ್ತದೆ. ರಾತ್ರಿಯ ಹೊತ್ತು ನೋವು ತೋರಿಬರುವವರಲ್ಲಿ, ನರತಂತುವಿನ ಮೂಲಕ ಬರುವ ಪ್ರೇರೇಪಣಾ ಶಕ್ತಿಯನ್ನು ತಡೆಗಟ್ಟಿ ಪರಿಣಾಮಕಾರಿಯಾಗಿ ಜಠರದ ಚಲನಶಕ್ತಿಯನ್ನು ಕುಗ್ಗಿಸುವ ಶಕ್ತಿಯನ್ನು ಬ್ಯಾಂಥೀನ್, ಪ್ರೋಬ್ಯಾಂಥೀನ್, ಆಕ್ಸಿಫೆನೋಮಿಯಂ ಔಷಧಿಗಳು ಪಡೆದಿವೆ. ಜಠರನಾಳ ಕಿರಿದುಗೊಂಡಾಗ ಈ ಔಷಧಿಗಳ ಸೇವನೆ ಬೇಡ.

ಹುಣ್ಣಿನ ಮಾಯುವಿಕೆಯಲ್ಲಿ ಮಾನಸಿಕ ಹಾಗೂ ದೈಹಿಕ ವಿಶ್ರಾಂತಿ ಬಹು ಮುಖ್ಯವಾದುದು. ಚಿಂತೆ, ವ್ಯಾಕುಲತೆಯನ್ನು ದೂರ ಮಾಡಬಲ್ಲ ಶಮನಕಾರಿ ಔಷಧಿ—ಫೀನೋಬಾರ್ಬಿಟೋನ್‌ನ್ನು ಅರ್ಧ ಗ್ರೇನ್‌ನಷ್ಟು ದಿನಕ್ಕೆ ಎರಡು–ಮೂರು ಬಾರಿ ಸೇವಿಸಿದರೆ ನಿದ್ದೆಯ ಮಂಪರು ಕವಿದು ವಿಶ್ರಾಂತಿ ದೊರೆ

ಯುತ್ತದೆ. ಆಯಾಸ, ದಣಿವನ್ನು ದೂರ ಮಾಡುವ ಇತರ ಮನೋಸ್ವಸ್ಥಕಾರಿ (tranquilliser) ಔಷಧಿಗಳನ್ನು ಉಪಯೋಗಿಸಬಹುದು.

ಆಲೀವ್ ಎಣ್ಣೆಯ ಸೇವನೆ. ಆಹಾರ ನಿಧಾನವಾಗಿ ಚಲಿಸುವಂತೆ ಮಾಡಿ ನೋವನ್ನುಂಟು ಮಾಡುವುದಿಲ್ಲ. ಇತರ ರಸದೂತಗಳಾದ ಎಂಟಿರೋಗ್ಯಾಸ್ಟ್ರೋನ್, ಸ್ಟಿಲ್‌ಬೋಸ್ಟ್ರಾಲ್, ಬಯೋಗ್ಯಾಸ್ಟ್ರೋನ್ ಹುಣ್ಣಿನ ಚಿಕಿತ್ಸೆಗೆ ಉಪಯೋಗಿಸಲಾಗಿದೆ. ಅತಿಮಧುರದ ಬೇರು (liquorice root) ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲುದು. ಈ ಚಿಕಿತ್ಸೆಗೆ ಬಗ್ಗದೆ ಆಮ್ಲದ ತಯಾರಿಕೆ ವಿಪುಲವಾಗಿ ಉಳಿದರೆ ತೀಕ್ಷ್ಣವಾದ ಕ್ಷ-ಕಿರಣಗಳನ್ನು (deep x-ray) ಹೊಟ್ಟೆಯ ಮೇಲೆ ಹಾಯಿಸಿದರೆ ಅವು ಆಮ್ಲ ಸಿದ್ಧತೆಯನ್ನು ಕೆಲ ಕಾಲ ಕಡಿಮೆ ಮಾಡಬಲ್ಲವು.

ಈ ರೀತಿಯ ಕ್ರಮಬದ್ಧವಾದ ಚಿಕಿತ್ಸೆಯನ್ನು ನೋವು ಪೂರ್ಣವಾಗಿ ಶಮನಗೊಳ್ಳುವ ವರೆಗೆ ನಡೆಸಬೇಕು. ಆಗ ಪರೀಕ್ಷೆ ಮಾಡಿ ನೋಡಿದಾಗ ಹೊಟ್ಟೆಯಲ್ಲಿ ಎಲ್ಲೂ ನೋವು ಕಾಣಿಸಿಕೊಳ್ಳಬಾರದು. ಮತ್ತು ಹೊಟ್ಟೆಯ ಚರ್ಮ ಬಿರುಸಾಗಿ ತೋರಬಾರದು. ಚಿಕಿತ್ಸಾಪರಿಣಾಮವನ್ನು ವ್ಯಕ್ತಿಗತವಾಗಿ ನಿರ್ಧರಿಸಬೇಕು. ತೀವ್ರ ತೆರನಾಗಿ ನೋವು ಬಂದ ಕಾಲದಲ್ಲಿ ಮೂರು ವಾರಕ್ಕಿಂತ ಕಡಿಮೆ ಅವಧಿಯ ಚಿಕಿತ್ಸೆಯೇ ಇಲ್ಲ. ಬಹಳ ದಿನಗಳಿಂದ ಬಿಡದೆ ಬರುತ್ತಿರುವ ನೋವು ಪೂರ್ಣವಾಗಿ

ಮಾಯಲು ಎರಡು–ಮೂರು ತಿಂಗಳಾದರೂ ಹಿಡಿಯುತ್ತದೆ. ವಯಸ್ಸು ಚಿಕ್ಕದಿರುವವರಲ್ಲಿ ಹುಣ್ಣು ಬೇಗ ಗುಣ ಹೊಂದು ತ್ತದೆ. ವಯಸ್ಸಾದವರಲ್ಲಿ, ದೀರ್ಘಾವಧಿ ಕಾಲ ನೋವು ಇರು ವವರಲ್ಲಿ, ಪದೇ ಪದೇ ಹುಣ್ಣು ಮರುಕಳಿಸಿ ಬಂದು ನೋವು ಬರುತ್ತಿರುವವರಲ್ಲಿ ಹುಣ್ಣು ಮಾಯ್ದು ಅದರ ಗುಣಲಕ್ಷಣಗಳು ದೂರವಾಗಲು ಹೆಚ್ಚು ಸಮಯ ಹಿಡಿಯುತ್ತದೆ.

ಸಾಮಾನ್ಯವಾಗಿ ತೀವ್ರ ತೆರನಾದ ಚಿಕಿತ್ಸೆಯನ್ನು ಪ್ರಾರಂಭಿ ಸಿದ ಒಂದೆರಡು ವಾರಗಳಲ್ಲಿ ನೋವು ಕಾಣಿಸಿಕೊಳ್ಳುವುದಿಲ್ಲ. ರಕ್ತಕಾರಿಕೆಯಿಂದ ಈ ರೋಗದ ಗುಣಲಕ್ಷಣಗಳು ಗೋಚರಿಸಿ ದ್ದಲ್ಲಿ, ಅಂತಹ ವ್ಯಕ್ತಿಯಲ್ಲಿ ಕಪ್ಪಾಗಿ ಹೋಗುವ ಮಲ ಒಂದೆರಡು ವಾರಗಳಲ್ಲಿ ಸಂಪೂರ್ಣವಾಗಿ ನಿಂತುಹೋಗುವುದು. ಒಂದು ವೇಳೆ ರಕ್ತ ಮಲದಲ್ಲಿ ವಿಸರ್ಜನೆಯಾಗುವುದು ಹಾಗೆಯೇ ಇದ್ದಲ್ಲಿ–ಅದರಲ್ಲೂ ವಯಸ್ಸಾದವರಲ್ಲಿ–ಅದು ಕ್ಯಾನ್ಸರ್ ರೋಗದ ಬೆಳವಣಿಗೆಯಿಂದ ಬರುತ್ತಿದೆಯೋ ಹೇಗೆ ಎಂಬುದರ ಬಗ್ಗೆ ಎಚ್ಚರಿಕೆ ವಹಿಸಬೇಕು. ಹುಣ್ಣು ಸರಿಯಾಗಿ ಮಾಯದಿದ್ದರೆ ಅದು ಮರುಕಳಿಸಿ ಬರುವುದು ಸ್ವಾಭಾವಿಕ ವಾದುದರಿಂದ ಸಂಪೂರ್ಣ ಚಿಕಿತ್ಸೆಯಾಗಬೇಕು.

ಶಸ್ತ್ರ ಚಿಕಿತ್ಸೆ : ಆಹಾರ ಪಾನೀಯಗಳ ಕಟ್ಟುನಿಟ್ಟು ಮತ್ತು ಔಷಧಗಳ ಚಿಕಿತ್ಸೆಯಿಂದ ಹುಣ್ಣಿನ ಗುಣಲಕ್ಷಣಗಳು ದೂರವಾಗದಿದ್ದರೆ, ಹುಣ್ಣು ಇರುವ ಜಾಗದಲ್ಲಿ ತೂತು ಬಿದ್ದರೆ, ಜಠರ ನಾಳವು ಆಹಾರದ ಮುಂಚಲನೆಗೆ ಅವಕಾಶ

ಕೊದದಂತೆ ತುಂಬಾ ಕಿರಿದುಗೊಂಡಾಗ, ರೋಗವು ಪದೇ ಪದೇ ಮರುಕಳಿಸಿ ಬಂದು ಮಾಯ್ದು ಉಂಟುಮಾಡಿದ ಮುರುಟಿ ನಿಂದ ಜಠರಕೋಶದ ಪ್ರದೇಶ ತುಂಬಾ ಕಿರಿದಾದಾಗ, ಪದೇ ಪದೇ ನೋವು ಬರುತ್ತ ಪ್ರತಿ ವರುಷವೂ ಎರಡು–ಮೂರು ತಿಂಗಳು ಹಾಸಿಗೆಯನ್ನು ಹಿಡಿದು ವಿಶ್ರಾಂತಿಯನ್ನು ತೆಗೆದುಕೊಂಡು ಔಷಧ ಚಿಕಿತ್ಸೆಯನ್ನು ಪಡೆಯುತ್ತ ದುಡಿಮೆಯ ದಿನಗಳನ್ನು ಕಳೆದುಕೊಳ್ಳುವಂತಾದರೆ, ತೀವ್ರ ತೆರನಾದ ರಕ್ತಸ್ರಾವವನ್ನು ನಿಲ್ಲಿಸುವುದು ವಿಫಲವಾದಾಗ, ಜಠರದ ಹುಣ್ಣು ಬಹುಮುಖ ವಾಗಿ ಕ್ಯಾನ್ಸರ್ ರೋಗದಂತೆ ಬೆಳೆದು ನಿಂತಾಗ ಶಸ್ತ್ರ ಚಿಕಿತ್ಸೆ ಅತ್ಯಗತ್ಯ. ಅಲ್ಲದೆ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಂಡ ಮೇಲೆ ಜಠರ ಮತ್ತು ಕರುಳಿನ ಜೋಡಣೆಯ ಸ್ಥಳದಲ್ಲಿ ಉದ್ಭವ ವಾಗುವ ಮಾಯದ ಹುಣ್ಣುಗಳು, ಇಲ್ಲವೆ ಮೇದೋಜೀರಕ ದ್ವೀಪ ಸಂಕಲ್ಪದ ರಸದೂತದಿಂದ ಹುಣ್ಣುಗಳ ಆಗಮನವಾಗಿ ದ್ದರೆ ಯೋಗ್ಯ ಶಸ್ತ್ರ ಚಿಕಿತ್ಸೆಯನ್ನು ಪಡೆಯಬೇಕು. ಔಷಧ ಚಿಕಿತ್ಸೆ ಮತ್ತು ದೀರ್ಘಕಾಲ ವಿಶ್ರಾಂತಿಯನ್ನು ಹೊಂದಲು ವ್ಯಕ್ತಿಯ ಆರ್ಥಿಕ ಸ್ಥಿತಿಗತಿಗಳು ಅನುಕೂಲಕರವಾಗಿಲ್ಲದಿದ್ದರೆ ಅಂತಹವರು ಶಸ್ತ್ರ ಚಿಕಿತ್ಸೆಗೆ ಒಳಪಡುವುದು ಮೇಲು.

ಶಸ್ತ್ರ ಚಿಕಿತ್ಸೆಯ ಕಾಲದಲ್ಲಿ ಹುಣ್ಣು ಇರುವ ಪ್ರದೇಶವ ನ್ನೊಳಗೊಂಡ ಜಠರದ ಅರ್ಧ ಭಾಗವನ್ನು ತೆಗೆದುಹಾಕುವರು. (Partial Gastrectomy) ಸಾಮಾನ್ಯವಾಗಿ ೪೫ ವರುಷ ಕ್ಕಿಂತಲೂ ಕಿರಿಯ ವಯಸ್ಸಿನವರಲ್ಲಿ, ಹಾಗೂ ಅದರ ಅನಂತರದ ವಯಸ್ಸಿನ ವ್ಯಕ್ತಿಗಳಲ್ಲಿ ಆಹಾರ ಹೋಗುವ ಜಠರ ನಾಳದ

ಮಾರ್ಗ ಕಿರಿದಾಗಿಲ್ಲದಿದ್ದರೆ ಇಂತಹ ಶಸ್ತ್ರ ಚಿಕಿತ್ಸೆ ಸಹಾಯಕ ವಾಗುವುದು.

ಜಠರನಾಳ ಕಿರಿದುಗೊಂಡಿದ್ದರೆ, ೪೫ ವರುಷಕ್ಕಿಂತ ಹೆಚ್ಚಿನ ವಯಸ್ಸಿನವರಲ್ಲಿ, ದೇಹಸ್ಥಿತಿ ಅಷ್ಟೊಂದು ಸಮರ್ಪಕ ವಾಗಿಲ್ಲದಿದ್ದರೆ ಜಠರ ಮತ್ತು ಕರುಳಿಗೆ ಸಂಪರ್ಕವೇರ್ಪಡಿಸುವ ಹೊಸ ದಾರಿಯನ್ನು ಜಠರ–ಕರುಳು ಜೋಡಣೆ ಶಸ್ತ್ರಕ್ರಿಯೆ ಯಿಂದ ಮಾಡಲಾಗುವುದು (gastro-jejunostomy).

ಅಲ್ಲದೆ ಈ ಪ್ರದೇಶಕ್ಕೆ ಇರುವ ಸಂಚಾರಿ ನರದ ಸಂಪರ್ಕ ವನ್ನು ಛೇದನಗೊಳಿಸುವುದರಿಂದ (vagotomy) ಆಮ್ಲ ತಯಾರಿಕೆಯು ಇಳುವರಿಯಾಗುವುದು. ಇದನ್ನು ಶಸ್ತ್ರ ಚಿಕಿತ್ಸಾ ನಂತರದ ಜಠರ–ಕರುಳು ಜೋಡಣೆಯಲ್ಲಿ ಮರುಕಳಿಸಿದ ಕರುಳು ಹುಣ್ಣಿನಲ್ಲಿ, ಚಿಕ್ಕ ವಯಸ್ಸಿನವರಲ್ಲಿ ತೋರಿಬರುವ ಕರುಳು ಹುಣ್ಣಿನಲ್ಲಿ ಮಾಡುವರು. ಇದರ ಛೇದನವನ್ನು ಜಠರದಲ್ಲಿ ಹೆಚ್ಚು ಆಮ್ಲ ತಯಾರಿಕೆಯಿದ್ದಾಗ, ಅದರ ಅರ್ಧ ಭಾಗವನ್ನು ತೆಗೆಯುತ್ತಿರುವ ಸಂದರ್ಭದಲ್ಲಿ ಇಲ್ಲವೆ ಜಠರ–ಕರುಳು ಜೋಡಣೆಯ ಕಾಲದಲ್ಲೂ ಮಾಡಬಹುದು.

ಶಸ್ತ್ರ ಚಿಕಿತ್ಸೆಯ ಅನಂತರದಲ್ಲಿ ಅನೇಕ ತೊಡಕುಗಳು ಉದ್ಭವವಾಗಬಲ್ಲವು. ನಾವು ತೆಗೆದುಕೊಳ್ಳುವ ಆಹಾರ ಕೆಲ ಘಂಟೆಗಳ ಕಾಲ ಜಠರದಲ್ಲಿದ್ದು, ಅಲ್ಲಿನ ರಸದೊಡನೆ ಸಂಪೂರ್ಣ ವಾಗಿ ಮಿಶ್ರಣ ಹೊಂದಿ, ಜೀರ್ಣ ಕ್ರಮದ ಪೂರ್ಣತೆಗೆ ನಿಧಾನ

ವಾಗಿ ಮುಂದೆ ಸಾಗುತ್ತದೆ. ಜಠರಕೋಶದ ಹೆಚ್ಚು ಪ್ರದೇಶ ವನ್ನು ತೆಗೆದುಹಾಕಿದ ಮೇಲೆ ಈ ಕ್ರಿಯೆಗೆ ಅಡ್ಡಿಯೊದಗುತ್ತದೆ. ಅನೇಕ ಬಾರಿ ನಿತ್ರಾಣ, ವಾಕರಿಕೆ, ಆಯಾಸ, ಎದೆಬಡಿತ, ಊಟ ವಾದ ಕೂಡಲೇ ಬೆವರುವಿಕೆ ಕಂಡುಬರುತ್ತದೆ. ಇದು ಆಹಾರ ತೀವ್ರ ಗತಿಯಲ್ಲಿ ಕರುಳನ್ನು ಸೇರಿ ಅದನ್ನು ಹಿಗ್ಗಿಸುವುದರಿಂದ ಆಗುತ್ತದೆ. ಕರುಳು ಹುಣ್ಣು ಹೊಂದಿದ ರೋಗಿ ಶಸ್ತ್ರಕ್ರಿಯೆಯ ಅನಂತರ ಮೊದಲಿನಂತೆ ಸಾಮಾನ್ಯವಾಗಿ ಊಟ ಮಾಡಲಾರಂಭಿ ಸಿದ ಮೇಲೆ ಈ ಪ್ರತಿಕ್ರಿಯೆ ತೋರಿಬರುವುದು. ಅಂತಹ ಗುಣ ಲಕ್ಷಣಗಳು ಆಹಾರ ಸೇವನೆಯ ನಂತರ ವಿಶ್ರಾಂತಿ, ಒಣಗಿದ ಗಟ್ಟಿಯಾದ ಆಹಾರ ಮತ್ತು ಶಮನಕಾರಿ ಗುಳಿಗೆಗಳ ಸೇವನೆ– ಈ ಕ್ರಮಗಳಿಂದ ದೂರವಾಗಬಲ್ಲವು. ಬಿಸಿಯಾದ ಆಹಾರ ಸೇವನೆ ಸಲ್ಲದು; ಭಾರಿ ಭೋಜನ ಅಂತಹವರಿಗೆ ಬೇಡ. ಸಾಮಾನ್ಯವಾಗಿ ಒಂದೆರಡು ವರುಷಗಳಲ್ಲಿ ಅವು ಮಾಯ ವಾಗುತ್ತವೆ.

ಶಸ್ತ್ರ ಚಿಕಿತ್ಸೆಯ ನಂತರ ಉಂಟಾಗುವ ಆಮ್ಲ ಪ್ರಮಾಣ ದಲ್ಲಿನ ಬದಲಾವಣೆ, ಕರುಳಿನಲ್ಲಿ ಆಹಾರ ವೇಗಗತಿಯಿಂದ ಸಾಗುವಿಕೆ ಮತ್ತು ಮೇದೋಜೀರಕ ರಸದ ಅಭಾವದ ಫಲ ವಾಗಿ ಆಹಾರದಿಂದ ಕೊಬ್ಬಿನ ಪದಾರ್ಥಗಳು ಮತ್ತು ಕಬ್ಬಿಣದ ಅಂಶಗಳ ಹೀರುವಿಕೆಗೆ ವ್ಯತ್ಯಯ ಉಂಟಾಗಿ ಕೆಲವರಲ್ಲಿ ಭೇದಿ, ಬಾವು, ತೂಕದ ಇಳುವರಿ, ರಕ್ತಹೀನತೆ ಮತ್ತು ಜೀವಸತ್ವಗಳ ನ್ಯೂನತೆಯ ಗುಣಲಕ್ಷಣಗಳು ಕಾಣಿಸಬಹುದು. ಅಲ್ಲದೆ ರಕ್ತ ದಲ್ಲಿ ಸಕ್ಕರೆ ಪ್ರಮಾಣದ ಇಳುವರಿ ಊಟವಾದ ೨–೩ ಘಂಟೆ

ಗಳ ನಂತರ ತೋರಿ ಬಂದು ಆಯಾಸ, ನಡುಕ, ಸುಸ್ತು, ಸ್ಮೃತಿ ತಪ್ಪುವಿಕೆ ಕಂಡು ಬರಬಹುದು. ಆಹಾರ ತೀವ್ರ ತೆರನಾಗಿ ಕರುಳಿ ನಿಂದ ಹೀರಲ್ಪಡುವುದನ್ನು ತಡೆಗಟ್ಟಲು ಹೆಚ್ಚು ಕೊಬ್ಬು ಸೇರಿದ ಪದಾರ್ಥಗಳ ಸೇವನೆ ಅಗತ್ಯ. ಇದರ ಫಲವಾಗಿ ಜಠರಕೋಶದ ಬರಿದಾಗುವಿಕೆಯನ್ನು ನಿಧಾನವಾಗಿಸಬಲ್ಲುದು.

ಜಠರ–ಕರುಳು ಜೋಡಣೆಯ ನಂತರ ಕರುಳಿನಲ್ಲಿ ಹುಣ್ಣು ಗೋಚರಿಸಬಹುದು. ಇದು ಜಠರದಲ್ಲಿನ ಆಮ್ಲ ಪ್ರಮಾಣದ ಹೆಚ್ಚುವರಿಯನ್ನು ಅವಲಂಬಿಸಿದೆ. ಆಗ ಊಟ ಆದಕೂಡಲೇ ನೋವು ಕಾಣಿಸಿಕೊಳ್ಳುವುದು. ಅದು ಸಾಮಾನ್ಯವಾಗಿ ಹೊಕ್ಕಳಿನ ಎಡಭಾಗದಲ್ಲಿರುತ್ತದೆ. ಅಂತಹ ನೋವು ಆಹಾರ ಮತ್ತು ಕ್ಷಾರ ಪದಾರ್ಥಗಳ ಸೇವನೆಯಿಂದ ಕಡಿಮೆಯಾಗುವು ದಿಲ್ಲ. ಆಗ ಶಸ್ತ್ರಕ್ರಿಯೆಯಿಂದ ಸಂಚಾರಿ ನರ ಛೇದನ ಮಾಡ ಬೇಕಾಗುವುದು. ನರ ಛೇದನದ ನಂತರ ಕೆಲವರಲ್ಲಿ ಆಹಾರದ ಅಪಚನ, ಹುಳಿತೇಗು, ಹಸಿವಿಲ್ಲದಿರುವಿಕೆ ಮತ್ತು ತೂಕದ ಇಳು ವರಿ ಗೋಚರಿಸಬಹುದು. ಈ ಗುಣಲಕ್ಷಣಗಳು ಮೆಕೊಥೆನ್ ಗುಳಿಗೆಗಳನ್ನು ಬಾಯಲ್ಲಿಟ್ಟುಕೊಂಡು ಅದರ ರಸಸೇವನೆ ಮಾಡಿ ದಾಗ ಕಡಿಮೆಯಾಗಬಲ್ಲುವು.

---

೮. ಸಲಹೆ

ಹೊಟ್ಟೆಯ ಹುಣ್ಣು ಮಾಯ್ದು ಹೋದ ಮೇಲೆ, ಮರು ಕಳಿಸಿ ಬರುವ ಸಂಭವಗಳು ವಿಪುಲವಾಗಿವೆ. ಅದಕ್ಕೆ ಪೂರಕ ವಾದ ಹಾಗೂ ಉತ್ತೇಜನಕಾರಿಯಾದ ಅಂಶಗಳು ಇದ್ದೇ ಇವೆ. ಅವುಗಳ ಬಗ್ಗೆ ಮುಂದಾಗಿ ಎಚ್ಚರಿಕೆಯನ್ನು ತೆಗೆದುಕೊಂಡು ಹಿಡಿತದಲ್ಲಿ ತರಬೇಕು. ಜೀವಿಸುವ ರೀತಿ, ಸ್ವಭಾವ, ಕೆಲಸದ ಅವಧಿ ಮತ್ತು ಅದರ ಒತ್ತಡ, ಗೃಹಕೃತ್ಯ ಮತ್ತು ಕೌಟುಂಬಿಕ ತೊಂದರೆಗಳು ಮತ್ತು ಸುತ್ತಲಿನ ಆವರಣ ಮಾನಸಿಕ ಕ್ಷೋಭೆ ಯನ್ನುಂಟು ಮಾಡಿ ತನ್ಮೂಲಕ ರೋಗದ ಬೆಳವಣಿಗೆಗೆ ಸಹಾ ಯಕವಾಗಬಹುದಾದುದರಿಂದ ಇರುವ ತೊಂದರೆಗಳನ್ನು ದೂರ ಮಾಡಿ, ಕೆಲಸ ಕಾರ್ಯ ವಿಧಾನಗಳಲ್ಲಿ ಅಗತ್ಯವಾದ ಸುಧಾರಿತ ಕ್ರಮಗಳನ್ನು ಅನುಸರಿಸುವುದು ಅಗತ್ಯ. ಹಾಗೆಯೇ ಆಹಾರ ಪಾನೀಯಗಳ ಬಗ್ಗೆ ಕೆಲವೊಂದು ನಿಯಮಗಳನ್ನು ಪಾಲಿಸು ವುದೂ ಅಗತ್ಯವಾಗಿದೆ.

ಆಹಾರವನ್ನು ವೇಳೆಗೆ ಸರಿಯಾಗಿ ಕಾಲಕಾಲಕ್ಕೆ ತೆಗೆದು ಕೊಳ್ಳಬೇಕು. ಆಹಾರ ಸೇವಿಸುವ ಸಮಯದಲ್ಲಿ ಅವಸರ

ಸಲ್ಲದು. ಎಲ್ಲ ಕೆಲಸಗಳನ್ನು ಬದಿಗಿರಿಸಿ ಅದಕ್ಕಾಗಿಯೇ ಪ್ರತ್ಯೇಕ ಸಮಯವನ್ನು ಮೀಸಲಿರಿಸಬೇಕು. ನಾವು ಮಾಡುವ ಎಲ್ಲ ದುಡಿಮೆಯ ಫಲ ಕೊನೆಗೆ ಹೊಟ್ಟೆಗಾಗಿ ಅಲ್ಲವೇ ? ಆಹಾರ ವನ್ನು ನಿಧಾನವಾಗಿ, ಚೆನ್ನಾಗಿ ಜಗಿದು ತಿನ್ನಬೇಕು. ಅದನ್ನು ತೆಗೆದುಕೊಳ್ಳುವ ಕಾಲದಲ್ಲಿ ಆಸಕ್ತಿಯಿಂದ ಪತ್ರಿಕೆ ಓದುವುದು, ಕಾಗದಪತ್ರಗಳ ಪರಿಶೀಲನೆ ಮಾಡಿ ಅವುಗಳ ವಿಲೇವಾರಿ ಮಾಡುವುದು, ಟೆಲಿಫೋನ್ ಮಾಡುವುದು ಸಲ್ಲದು. ದೈಹಿಕ ಆಯಾಸದಿಂದ ಸುಸ್ತಾದಾಗ ಕೂಡಲೇ ಆಹಾರವನ್ನು ತೆಗೆದು ಕೊಳ್ಳದೆ ಕೆಲ ಸಮಯ ವಿಶ್ರಾಂತಿಯನ್ನು ತೆಗೆದುಕೊಂಡು ಅನಂತರ ಆಹಾರವನ್ನು ತೆಗೆದುಕೊಳ್ಳಬೇಕು. ಅವಸರದಲ್ಲಿರು ವವರು, ಚೆನ್ನಾಗಿ ಪಚನಗೊಳ್ಳದ ಆಹಾರವನ್ನು ತೆಗೆದುಕೊಂಡು ತೊಂದರೆಪಟ್ಟುಕೊಳ್ಳುವುದಕ್ಕಿಂತ, ಹಾಲನ್ನೋ, ಬಿಸ್ಕತ್ತನ್ನೋ ಸೇವಿಸುವುದು ಒಳ್ಳೆಯದು.

ಹುಣ್ಣಿನ ವ್ಯಕ್ತಿಗೆ ಹಾಲಿಗಿಂತ ಶ್ರೇಷ್ಠವಾದ ಆಹಾರ ಯಾವುದೂ ಇಲ್ಲ. ಹಾಲನ್ನು ಯಾವಾಗ ಬೇಕಾದರೂ ತೆಗೆದು ಕೊಳ್ಳಬಹುದು. ಅದು ಸಾಧ್ಯವಾಗದಿದ್ದರೆ ಕಿಸೆಯಲ್ಲಿ ಬಿಸ್ಕತ್ತ ನ್ನಿರಿಸಿಕೊಂಡು ಆಗಾಗ್ಗೆ ಅವುಗಳನ್ನು ಬಾಯಲ್ಲಿ ಮೆಲುಕಾಡಿಸು ತ್ತಿರಬಹುದು. ಮ್ಯಾಗ್ನೀಶಿಯಂ ಟ್ರೈಸಿಲಿಕೇಟ್ ಮತ್ತು ಅಲ್ಯು ಮೀನಿಯಂ ಹೈಡ್ರಾಕ್ಸೈಡ್ ಇರುವ ಒಂದೋ ಅಥವಾ ಎರಡೋ ಗುಳಿಗೆಗಳನ್ನು ಆಹಾರಸೇವನೆಯ ನಂತರ, ಅದರ ಮಧ್ಯಂತರ ಅವಧಿಯಲ್ಲಿ ಯಾವಾಗಲಾದರೂ ಹೊಟ್ಟೆಯ

ಗುಂಡಿಯಲ್ಲಿ ಉರಿ ತೋರಿದಾಗ ಬಾಯಲ್ಲಿಟ್ಟುಕೊಂಡು ಜಗಿದು ಅದರ ರಸವನ್ನು ಹೀರಬೇಕು. ಗಟ್ಟಿಯಾದ ಹಾಗೂ ಒರಟಾದ ಆಹಾರ ಪದಾರ್ಥಗಳ ಸೇವನೆ ಸಲ್ಲದು. ಹಣ್ಣಿನ ಸಿಪ್ಪೆ, ಮಾವಿನಕಾಯಿ–ನಿಂಬೆಕಾಯಿ ಉಪ್ಪಿನಕಾಯಿ, ಅಡಿಕೆ, ಮಾಗದ ಹಣ್ಣುಗಳು, ಗಟ್ಟಿಯಾದ ಮಾಂಸ, ಬೇಯಿಸದ ತರಕಾರಿ ಒಳ್ಳೆಯದಲ್ಲ. ಅಲ್ಲದೆ ಕುಂಬಳಕಾಯಿ, ಟೊಮ್ಯಾಟೋ, ಗಟ್ಟಿ ಯಾದ ಬಟಾಣಿ, ಆಲೂಗಡ್ಡೆ, ಅವರೇಕಾಯಿ, ಕ್ಯಾಬೀಜ, ಮೂಲಂಗಿ, ನುಗ್ಗೇಕಾಯಿ, ಶುಂಠಿ, ನೀರುಳ್ಳಿ, ಖಾರದ ಚಟ್ನಿ, ಮೆಣಸು, ಸಾಸಿವೆ, ತುಂಬಾ ಒಗ್ಗರಣೆ ಹಾಕಿದ ಸಂಬಾರ, ಸಾರು, ಹೆಚ್ಚು ಮಸಾಲೆಯಿಂದ ಕೂಡಿದ ಪದಾರ್ಥಗಳು, ಚಿಪ್ಸ್, ಚಕ್ಕುಲಿ, ನಿಪ್ಪಿಟ್ಟಿನಂತಹ ಕರಿದ ಪದಾರ್ಥಗಳು, ಖಾರದ ಪದಾರ್ಥಗಳನ್ನು ತಿನ್ನುವುದರಿಂದ ಹುಣ್ಣಿನ ನೋವು ಪುನರಪಿ ಬರುವಂತೆ ಮಾಡಬಲ್ಲವು.

ಬರೀ ಹೊಟ್ಟೆಯಲ್ಲಿ ಧೂಮಪಾನ ಸಲ್ಲದು. ಧೂಮ ಪಾನವನ್ನು ಪೂರ್ಣವಾಗಿ ನಿಲ್ಲಿಸಿದರೆ ದೇಹಕ್ಕೂ ಹೊಟ್ಟೆಗೂ ಯಾವ ತೊಂದರೆಯಿಲ್ಲ. ಒಂದುವೇಳೆ ಹಾಗೆ ಸೇದಬೇಕೆನಿಸಿದರೆ ತುಂಬಿದ ಹೊಟ್ಟೆಯ ಮೇಲೆ ಸಿಗರೇಟನ್ನು ಸೇದಬಹುದು. ಮಾದಕ ಪದಾರ್ಥಗಳ ಸೇವನೆಯನ್ನು ಕಡಿಮೆ ಮಾಡಿದಷ್ಟೂ ಒಳ್ಳೆಯದು. ಮಾದಕ ಪೇಯ ಸೇವನೆಯ ರೂಢಿ ಇರುವವರು ಆಹಾರದೊಡನೆ ಬೀರ್, ವೈನ್, ವಿಸ್ಕಿಗಳನ್ನು ಸೇವಿಸಬಹುದೇ ವಿನಃ ಅವುಗಳನ್ನು ಬರೀ ಹೊಟ್ಟೆಯಲ್ಲಿ ಕುಡಿಯಬಾರದು.

ಹಲ್ಲುಗಳ ರಕ್ಷಣೆಯತ್ತ ಸದಾ ಗಮನವೀಯಬೇಕು. ವಸಡು, ಹಲ್ಲು, ಬಾಯಿಯ ಮೂಲಕ ರೋಗಾಣುಜೀವಿಗಳನ್ನು ಕೂಡಿದ ಪದಾರ್ಥಗಳು ಒಳಸೇರದಂತೆ ಆರೋಗ್ಯವನ್ನು ಕಾಯ್ದುಕೊಳ್ಳಬೇಕು. ಆಗಾಗ್ಗೆ ಬರಬಹುದಾದ ನೆಗಡಿ, ಶೀತ, ಚಳಿಜ್ವರ ಬಂದಾಗ ಪೂರ್ಣ ವಿಶ್ರಾಂತಿಯನ್ನು ತೆಗೆದುಕೊಂಡು ಹಾಸಿಗೆಯಲ್ಲಿರಬೇಕು. ಆಗ ಮಿತಾಹಾರ ಅವಶ್ಯಕ. ತಂಪಾದ ಹವೆಯಿದ್ದಾಗ ದೇಹದ ಉಷ್ಣತೆಯನ್ನು ಉಣ್ಣೆಯ ವಸ್ತ್ರಗಳಿಂದ ಕಾಪಾಡಿಕೊಳ್ಳಬೇಕು. ಅನೇಕ ಬಾರಿ ಮಲಬದ್ಧತೆ ಉಂಟಾಗುವ ಸಂಭವ ಇರುವುದರಿಂದ ಆಗಾಗ್ಗೆ ನಿರ್ವಾಸಿಕ ನಿರ್ವರ್ಣ ತೈಲ (liquid paraffin) ವನ್ನು ಸೇವಿಸಬಹುದು.

ಕೆಲಸದ ಒತ್ತಡದಿಂದ ದೇಹ ಮತ್ತು ಮನಸ್ಸು ತುಂಬಾ ಘಾಸಿಗೊಳ್ಳಬಹುದಾದುರಿಂದ ಆಗಾಗ್ಗೆ ವಿಶ್ರಾಂತಿ ಅಗತ್ಯ. ಆ ವಿಶ್ರಾಂತಿ ತನ್ಮೂಲಕ ಹೊಟ್ಟೆಗೂ ಲಭಿಸುವುದು. ಶ್ರಮ ಮತ್ತು ಮಾನಸಿಕ ಒತ್ತಡ ತುಂಬಾ ಆದಾಗ, ಹೊಟ್ಟೆಯು ಚೆನ್ನಾಗಿಲ್ಲದೆ ಅಪಚನ, ನೋವು ಉಂಟಾಗಿದ್ದರೆ ಅಥವಾ ತುಂಬ ಬೇಸರವಾಗಿದ್ದರೆ ಪೂರ್ಣ ವಿಶ್ರಾಂತಿಯನ್ನು ತೆಗೆದುಕೊಳ್ಳಬೇಕು. ಮನರಂಜನೆ, ನೈಸರ್ಗಿಕ ಆವರಣದಿಂದೊಡಗೂಡಿದ ವಿಹಾರ ಸ್ಥಳಗಳಲ್ಲಿ ಕೆಲವೊಂದು ವೇಳೆಯನ್ನು ಕಳೆದರೆ ಮನಕ್ಕೆ ವಿರಾಮ; ದೇಹಕ್ಕೆ ಆರಾಮ ದೊರೆತು ಒಳ್ಳೆಯದಾಗುವುದು. ವಾರಕ್ಕೊಮ್ಮೆಯಾದರೂ ವಿಶ್ರಾಂತಿಯನ್ನು ಪಡೆಯಬೇಕು. ಊಟ

ವಾದ ಮೇಲೆ ಕೆಲಹೊತ್ತು ವಿಶ್ರಾಂತಿಯನ್ನು ತೆಗೆದುಕೊಳ್ಳ ಬೇಕು. ನಿದ್ದೆ ಬರದಿದ್ದರೆ ಫಿನೋಬಾರ್ಬಿಟೋನ್ ಗುಳಿಗೆ ಯೊಂದನ್ನು ತೆಗೆದುಕೊಳ್ಳಬಹುದು.

ಬೇರೆ ರೋಗಗಳ ಚಿಕಿತ್ಸೆಗಾಗಿ ಔಷಧಿಗಳನ್ನು ಸೇವಿಸ ಬೇಕಾದರೆ ಅವುಗಳನ್ನು ಬರಿಯ ಹೊಟ್ಟೆಯಲ್ಲಿ ಸೇವಿಸುವುದು ಬೇಡ. ಆಹಾರದೊಡನೆ ಔಷಧಿಯನ್ನು ಸೇರಿಸಿ ತೆಗೆದು ಕೊಳ್ಳುವುದು ಉತ್ತಮ. ಆಸ್ಪಿರಿನ್, ಕಾರ್ಟಿಸೋನ್, ಫಿನೈಲ್ ಬುಟಾಸೋನ್ ಮೊದಲಾದ ಗುಳಿಗೆಗಳು ಜಠರದ ಹುಣ್ಣನ್ನು ಉಲ್ಬಣಗೊಳಿಸಬಹುದಾದುದರಿಂದ ಅವುಗಳನ್ನು ತೆಗೆದುಕೊಳ್ಳ ದಂತೆ ಗಮನವಿರಿಸಬೇಕು.


ಒಮ್ಮೆ ಹೊಟ್ಟೆಯ ಹುಣ್ಣನ್ನು ಅನುಭವಿಸಿದ ರೋಗಿ ಇವೆಲ್ಲ ಎಚ್ಚರಿಕೆಯ ಉಪಾಯಗಳನ್ನು ನಿಯಮಬದ್ಧವಾಗಿ ಅನುಸರಿಸಬೇಕು. ಒಂದು ವೇಳೆ ಮತ್ತೆ ರೋಗದ ಲಕ್ಷಣ ಗಳು ಮರುಕಳಿಸಿದರೆ, ವೈದ್ಯರಿಗೆ ಕೂಡಲೇ ತೋರಿಸಿ ಸಲಹೆ ಪಡೆಯಬೇಕು. ನೋವು ತೀವ್ರ ತೆರವಾಗುವವರೆಗೆ ಕಾಯು ವುದು ಬೇಡ. ಹುಣ್ಣು ಬಲವಾಗಿ ಬೆಳೆಯುವುದಕ್ಕೆ ಅವಕಾಶ ಕೊಡದೆ ಶೀಘ್ರವಾಗಿ ಅದರ ಚಿಕಿತ್ಸೆಯನ್ನು ಪಡೆಯಬೇಕು.



ಚಿತ್ರ ೧. ಹೊಟ್ಟೆಯ ಹುಣ್ಣಿನಿಂದ ಬರುವ ನೋವಿನ ಪ್ರದೇಶವನ್ನು ರೋಗಿ ಬೆಳಿರನಿಂಪ ತೋರಿಸುತ್ತಿರುವ ಚಿತ್ರ. ನೋವಿನ ಶಮನಕ್ಕೆ ಆ ಪ್ರದೇಶವನ್ನು ಸುಡಿಸಿಕೊಂಡಿರುವುದನ್ನು ಕಾಣಬಹುದು.




ಚಿತ್ರ ೨. ಜಠರನಾಳ ಕಿರಿದಾದಾಗ ಆಹಾರದ ಚಲನೆಗೆ ತಡೆಯುಂಟಾಗಿ ಅದು ಗಂಟಿನ ರೂಪದಲ್ಲಿ ಹೊಟ್ಟೆಯ ಮೇಲೆ ತೋರಿಬರುವುದು.




ಚಿತ್ರ ೩. ರಂಧ್ರಗೊಂಡಿರುವ ಜಠರ ಹುಣ್ಣು.



ಚಿತ್ರ ೪. ಜಠರ ಕೋಶದೊಳಕ್ಕೆ ಸೇರಿಸಲ್ಪಡುವ ರಬ್ಬರ್ ನಳಿಗೆ.



ಚಿತ್ರ ೫. ಬೇರಿಯಂ ಚಿತ್ರ. ಹುಣ್ಣಿನಿಂದ ವಿಕೃತಿಹೊಂದಿದ ಕರುಳು ಕವಚ.



ಚಿತ್ರ ೬. ಕಿರಿದಾದ ಜಠರ ನಾಳದ ಫಲವಾಗಿ ಹಿಗ್ಗಿದ ಜಠರ ಕೋಶ. ಅದು ಕೆಳ ಹೊಟ್ಟೆಗೆ ಇಳಿದಿದೆ.



ಚಿತ್ರ ೭. ಪರೀಕ್ಷೆಗೆ, ಜಠರರಸವನ್ನು ರಬ್ಬರ್‌ನಳಿಗೆ
ಮುಖಾಂತರ ಹೊರಕ್ಕೆಳೆಯುತ್ತಿರುವುದು.



ಚಿತ್ರ ೮. ಉಬ್ಬಣಿಸಿದ ಹುಣ್ಣಿನಿಂದಾದ ತೀವ್ರತರವಾ
ನೋವನ್ನು ಶಮನಗೊಳಿಸಲು ಬಾಟಲಿಯಿಂದ ಹಾಲನ್ನು ಹನಿಹ
ಯಾಗಿ ಹೊಟ್ಟೆಗೆ ರಬ್ಬರ್ ನಳಿಗೆಯ ಮೂಲಕ ಸೇರುತ್ತಿರುವ ಚಿತ್ರ

ನಳಿಗೆ.

೨೮. ಗಲಜ್ಜರ ಕ್ರಾಂತಿ (,,) —ಸಿ. ವೀರಬಸಣ್ಣ
೨೯. ಕನ್ನಡ ಕಥಾಸೃಷ್ಟಿ (ದ್ವಿ. ಆ.) —ಬಿ. ಬಿ. ಮಹೀಶವಾಡಿ
೩೦. ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರರಸ (ದ್ವಿ. ಆ.)
—ಕೆ. ಕೃಷ್ಣಮೂರ್ತಿ
೩೧. ನೀರಾವರಿ ಬೇಸಾಯ —ಎಸ್. ಎ. ಹೊಸಮನಿ
೩೨. ಸಾರ್ವಜನಿಕ ಅಭಿಪ್ರಾಯ —ಎನ್. ರಾಜಗೋಪಾಲರಾವ್
೩೩. ಕನ್ನಡ ಕಾವ್ಯಗಳಲ್ಲಿ ಕಿರಾತಾರ್ಜುನ ಪ್ರಸಂಗ
—ದೇವೇಂದ್ರಕುಮಾರ ಹಕಾರಿ
೩೪. ಕನ್ನಡಕ್ಕೆ ಪುರಂದರದಾಸರು ನೀಡಿದ ಕೊಡುಗೆ
—ಜಿ. ಡಿ. ನಾಡಕರ್ಣಿ
೩೫. ಫ್ಯಾಶನ್ನುಗಳು (ದ್ವಿ. ಆ.) —ಕೆ. ಡಿ. ತಂಗೋಡ
೩೬. ಮಹಾಕವಿ ರಾಘವಾಂಕನ ಪಾತ್ರಗಳಲ್ಲಿ ತತ್ವನಿಷ್ಠೆ (ದ್ವಿ. ಆ.)
- ಬಿ. ವ್ಹಿ. ಮಲ್ಲಾಪುರ
೩೭. ಅಭಿವೃದ್ಧಿ ಯೋಜನೆಗಳಲ್ಲಿ ಸಹಕಾರದ ಪಾತ್ರ (ದ್ವಿ. ಆ.)
—ಎಸ್. ಜಿ. ಕರಭಂಟನಾಳ
೩೮. ಕನ್ನಡ ಜೈನ ಪುರಾಣಗಳು (ದ್ವಿ. ಆ.)—ಎಸ್. ಎನ್. ನಾಯಕ
೩೯. ಕನ್ನಡ ನಾಟ್ಯಸೃಷ್ಟಿ —ಎಚ್. ಟಿ. ಲೋಕೂರ
೪೦. ಹರಿಹರನು ಚಿತ್ರಿಸಿದ ಶಿವಶರಣೆಯರು (ದ್ವಿ. ಆ.)—ಬಿ. ಬಿ. ಹೆಂಡಿ
೪೧. ನೀವು ಬಯಸುವ ಮಗು ಗಂಡೊ ? ಹೆಣ್ಣೊ ? (ದ್ವಿ. ಆ.)
—ಕೆ. ಆರ್. ರಾಮಸ್ವಾಮಿ
೪೨. ಅಂಡಯ್ಯ —ಬಿ. ಎಸ್. ಕುಲಕರ್ಣಿ
೪೩. ಬೆಳವಲನಾಡಿನ ಬೆಳೆಗಳು —ಎಸ್. ಎ. ಹೊಸಮನಿ
೪೪. ಜಾನಪದ ಕಥೆಗಳು (ದ್ವಿ. ಆ.) —ಎಲ್. ಆರ್. ಹೆಗಡೆ
೪೫. ಸುಧಾರಿಸಿದ ಬೇಸಾಯ —ಎ. ಸಿ. ಕಲ್ಯಾಣಿಮಠ
೪೬. ಕನ್ನಡನಾಡಿನ ಐತಿಹಾಸಿಕ ಮಹಾಪುರುಷರು
—ಬಿ. ಆರ್. ಗೋಪಾಲ
೪೭. ಗ್ರಂಥಾಲಯದ ಅಂತರಂಗ —ಎಸ್. ಆರ್. ಗುಂಜಾಳ
೪೮. ಸ್ತ್ರೀ ಮತ್ತು ಶಿಕ್ಷಣ —ವನಮಾಲಾ ಆಚಾರ್
೪೯. ಜಾಗತಿಕ ಸರಕಾರ —ಸಿ. ವೀರಬಸಣ್ಣ
೫೦. ಸಮುದಾಯ ಸಂಘಟನೆ —ಎಚ್. ಎಂ. ಮರುಳಸಿದ್ಧಯ್ಯ
೫೧. ಅಶೋಕನ ಧರ್ಮಶಾಸನಗಳು —ಶ್ರೀನಿವಾಸ ರಿತ್ತಿ
೫೨. ಪ್ರಾಚೀನ ಭಾರತದ ರಾಜ್ಯಪದ್ಧತಿ (ದ್ವಿ. ಆ.)
—ಸಿ. ವ್ಹಿ. ರಂಗಸ್ವಾಮಿ
೫೩. ಅಕ್ಕಮಹಾದೇವಿ ಮತ್ತು ಮೀರಾಬಾಯಿ
—ಎಸ್. ಎಸ್. ಕಬ್ಬಿನ

೫೪. ಕನ್ನಡ ಕಾವ್ಯದಲ್ಲಿ ವೀರರಸ ನಿರೂಪಣೆ —ಬಿ. ಬಿ. ಮಹೀಶವಾಡಿ

೫೫. ಹರಿಹರ ಮಹಾಕವಿಯ ಕೆಲವು ಮಹೋನ್ನತ ವಿಚಾರಗಳು —ಬಿ. ಸಿ. ಜವಳಿ

೫೬. ಭಾರತ ರಾಜ್ಯಘಟನೆ —ಎಂ. ಎಸ್. ಪಾಟೀಲ

೫೭. ಪಂಚಾಯತಿ ರಾಜ್ಯ —ಎಸ್. ಜಿ. ಕರಭಂಟನಾಳ ಮತ್ತು ಕೆ. ಡಿ. ಬಸವ

೫೮. ವಿಷಮಜ್ವರ —ಪಿ. ಎಸ್. ಶಂಕರ

೫೯. ಪುಸ್ತಕ ಭಾಂಡಾರ ಕಾಯದೆ —ಜಿ. ಎಂ. ಪಾಟೀಲ

೬೦. ಸರ್ ಐಸಾಕ್ ನ್ಯೂಟನ್ —ಆರ್. ವ್ಹಿ. ಅಬ್ಬಿಗೇರಿ

೬೧. ಗ್ರಾಮಾಭ್ಯುದಯದ ಯೋಜನಾಂಗಗಳು —ಟಿ. ಕೆ. ಮೇಟಿ

೬೨. ಹರಿಜನರ ಸಮಸ್ಯೆಗಳು ಹಾಗು ಅವುಗಳ ಪರಿಹಾರ —ಎನ್. ಕೆ. ಕಡೆತೋಟದ

೬೩. ರಾಸಾಯನಿಕ ಕಿಣ್ವಗಳು —ಎಂ. ಎಸ್. ಎಸ್. ರಾವ್

೬೪. ಪ್ರಜಾಪ್ರಭುತ್ವದ ಮೂಲತತ್ವಗಳು —ಕೆ. ಬಿ. ಬಕ್ಕಪ್ಪ

೬೫. ಹೃದಯಾಘಾತ — ಪಿ. ಎಸ್. ಶಂಕರ್

೬೬. ಆಭರಣಗಳ ಬಗೆಗೆ ಸಾಮಾಜಿಕ ದೃಷ್ಟಿಕೋನ —ಡಿ. ಎ. ಚಿಕ್ಕಿ

೬೭. ಶ್ರೀ ರಾಮಾಯಣ ದರ್ಶನದಲ್ಲಿ ಕುವೆಂಪು ಸೃಜಿಸಿದ ಮೂರು ಪಾತ್ರಗಳು —ಎಂ. ಜಿ. ಬಿರಾದಾರ

೬೮. ಯೋಜನೆಗಳೇಕೆ ಬೇಕು ? —ಎಸ್. ಎಸ್. ಯಮ್ಮಿ

೬೯. ಸಗರನಾಡಿನ ಶಿವಶರಣರು —ವ್ಹಿ. ಶಿವಾನಂದ

೭೦. ವಿಜ್ಞಾನದ ದೃಷ್ಟಿಯಲ್ಲಿ ಸೃಷ್ಟಿ —ಆರ್.ಎಸ್.ಭೂಸನೂರಮಠ

೭೧. ವಿಜಯನಗರದ ನಿರ್ಣಾಯಕ ಯುದ್ಧ —ಎಸ್. ಬಿ. ಕೋಡದ

೭೨. ಬಸವಣ್ಣನವರನ್ನು ಕುರಿತ ಶಾಸನಗಳು—ಎಂ.ಎಂ.ಕಲಬುರ್ಗಿ

೭೩. ಆಧುನಿಕ ಭಾಷಾ ವಿಜ್ಞಾನ —ಜಿ. ಎಸ್. ಕುಳ್ಳಿ

೭೪. ಪುರಾಣ ಜಿಜ್ಞಾಸೆ — ಎಲ್. ಆರ್. ಹೆಗಡೆ

೭೫. ಭಾರತದಲ್ಲಿ ಶೈಕ್ಷಣಿಕ ಪ್ರಯೋಗ —ವ್ಹಿ. ಎಸ್. ಕುಲಕರ್ಣಿ

೭೬. ಅಧಿಕ ಉತ್ಪಾದನೆಗಾಗಿ ಮಿಶ್ರತಳಿ ಬೆಳೆಗಳು —ಎ. ಸಿ. ಕಲ್ಯಾಣಿಮಠ

೭೭. ಕನ್ನಡ ನುಡಿಯ ಬೆಳವಣಿಗೆ —ಎಚ್. ಜಿ. ಲೋಕೂರ

೭೮. ಹರಿಹರನ ಗಿರಿಜಾಕಲ್ಯಾಣ —ಬಿ. ವ್ಹಿ. ಶಿರೂರ

ಬೆಲೆ ಪ್ರತಿ ಒಂದಕ್ಕೆ ೨೫ ಪೈಸೆ